"SATYAVADI" ॥ ಶ್ರೀ ॥ Regd No M 1299

ಸತ್ಯವಾದಿ

ಆರಮನೆ ಸರಸ್ಕೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದದು

Proprietors—The Satyavadi Limited, Mysore

Founded 1917

ವಾರ್ಷಿಕ ಚಂದಾ ಸ್ಥಳಕ್ಕೆ ರೂ. 1—0—0
ಪರಸ್ಥಳಕ್ಕೆ ಅಂಚೆ ವೆಚ್ಚ ಸೇರಿ 1—10—0

ಸಂಪುಟ 25 ಸಂಚಿಕೆ 10] ಬುಧವಾರ 6-11-1940 [ಬಿಡಿಪ್ರತಿ 6 ಕಾಸು

"ಹರಟೆ"

"ಮಲ್ಲ"

ಇಟಲಿಯೂ ಜರ್ಮನಿಯೂ ಸಧ್ಯದಲ್ಲಿಯೇ ಇಂಡಿಯಾದ ಮೇಲೆ ಧಾಳಿ ನಡೆಸುತ್ತಾರೆ ಎಂಬ ಬಲವಾದ ವರ್ತಮಾನ ಹುಟ್ಟಿದೆ. ಇದರಿಂದ ಯಾರೂ ಗಾಬರಿಯಾದಂತೆ ಕಾಣುವುದಿಲ್ಲ. ಗಾಬರಿಯಾಗಲು ಕಾರಣವೂ ಇಲ್ಲ. ಈ ವಿಚಾರದಲ್ಲಿ ಇಂಡಿಯಾದ ಜನಗಳು ಮೊದಲೇ ವಿಚಾರಕ್ಕೆಯನ್ನು ತೆಗೆದುಕೊಂಡಿದ್ದಾರೆ. ಇಂಡಿಯಾದಲ್ಲಿ ಇರುವ ಬಂಗಾರ ದುಡ್ಡನ್ನೆಲ್ಲಾ ಮೊದಲೇ ಇಂಗ್ಲೆಂಡಿಗೆ ಸಾಗಿಸಿಬಿಟ್ಟಿದೆ. ಈಗ ಇಲ್ಲಿಯ ಜನಗಳಿಗೆ ತಿನ್ನುವುದಕ್ಕೇ ಗತಿಯಿಲ್ಲ. ಆದುದರಿಂದ ಹಿಟ್ಲರ್ ಮುಸೋಲಿನಿ ಇಂಡಿಯಾದ ಮೇಲೆ ಬಂದರೆ ಅವರಿಗೇನೂ ಸಿಕ್ಕುವಂತಿಲ್ಲ. ಗಾಬರಿಯಾಕೆ ಪಡಬೇಕು?

ಅ ಪೇ ರಿ



ಯುದ್ಧದ ಸಹಾಯಕ್ಕಾಗಿ ಪ್ರತಿ ಬಸ್ಸಿಗೂ ಪ್ರತಿ ದಿನವೂ ಒಂದೊಂದಾಣೆಯಂತೆ ರಾಜಧಾನಿಯ ಬಸ್ ಸ್ಟ್ಯಾಂಡಿನಲ್ಲಿ ವಸೂಲ್ಮಾಡುತ್ತಾರಂತೆ. ಸುಲಭದಲ್ಲಿ ಸಹಾಯ ಮಾಡುವ ಉಪಾಯವಿದು. ನಿರುದ್ಯೋಗಿಗಳ ಸಹಾಯಕ್ಕೂ ಇದೇ ರೀತಿಯ ಉಪಾಯವನ್ನು ಹುಡುಕಕೂಡದೇಕೆ?

ಂ ಂ

"ನಿಮ್ಮ ರಕ್ಷಣೆಗೋಸ್ಕರ ಯುದ್ಧಕ್ಕೆ ಸಹಾಯ ಮಾಡಿರಿ" ಎಂದು ಒಂದು ಪ್ರಕಟಣೆ. ನಮ್ಮ ರಕ್ಷಣೆಯು ಬ್ರಿಟಿಷ್ ಸಾಮ್ರಾಜ್ಯ ಆಧೀನದಲ್ಲಿ ಭದ್ರವಾಗಿದೆ. ರಕ್ಷಣೆಗಾಗಿ ಚಿಂತಿಸಬೇಕಾದುದಿಲ್ಲ.

ಂ ಂ

"ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯೇ ನಮ್ಮ ಉದ್ದೇಶ" ವೆಂದು ಮೈಸೂರು ರಾಷ್ಟ್ರೀಯ ಮಹಾಸಭೆಯವರ ಘೋಷಣ. ಈ ಉದ್ದೇಶ ಸಾಧನೆಗಾಗಿ ಕಾರ್ಯಕ್ರಮವೇನೆಂಬುದು ತಿಳಿದುಕೊಳ್ಳಬೇಕಾದ ವಿಷಯ. ಅರ್ಜಿ ಹಾಕುವುದೇ? ನಿಯೋಗಗೋಷ್ಟಿ ಹೋಗುವುದೆ? ಪ್ರಾರ್ಥನೆ ಮಾಡುವುದೇ? ಸಭೆಗಳಲ್ಲಿ ನಿರ್ಣಯವನ್ನು ಮಾಡುವದೇ? ಸತ್ಯಾಗ್ರಹ ಮಾಡುವದೇ? ಕಾನೂನುಭಂಗ ಚಳವಳಿ ನಡೆಸುವದೇ? ಅಥವಾ ಮರಣಾಂತ ಉಪವಾಸ ಮಾಡುವದೇ? ಒಂದೂ ಗೊತ್ತಿಲ್ಲ. ಪ್ರಾಯಶಃ ಮೈಸೂರು ರಾಷ್ಟ್ರೀಯ ಮಹಾಸಭೆಗೆ ಉದ್ದೇಶವೇ ಹೊರತು, ಆ ಉದ್ದೇಶ ಸಾಧನೆಗಾಗಿ ಕಾರ್ಯವೇನೂ ಇಲ್ಲವೆಂದು ಕಾಣುತ್ತದೆ.

ಂ ಂ

ರಾಜಧಾನಿಯ ಕೆಲವು ಸ್ಕೂಲುಗಳಲ್ಲಿ ಒಳ್ಳೆಯ ವಿದ್ಯಾಭ್ಯಾಸವೇ ಸಿಕ್ಕುತ್ತದೆ ಎನ್ನಬೇಕು. ಬೇರೆ ಯಾರೂ ಎಲ್ಲೂ ಕಲಿಸದಂತಹ ವಿದ್ಯೆಯನ್ನು ಇಲ್ಲಿಯ ಸ್ಕೂಲುಗಳಲ್ಲಿ ಹೇಳಿಕೊಡುತ್ತಾರೆ. ಸಾರ್ವಜನಿಕರೂ ಸರಕಾರದವರೂ ನಗರದಲ್ಲಿ ಭಿಕ್ಷುಕರ ಹಾವಳಿಯನ್ನು ಯಾವ ರೀತಿ ಕಡಮೆ ಮಾಡಬಹುದೆಂದು ಅನುದಿನವೂ ಆಲೋಚಿಸುತ್ತಿದ್ದಾರೆ. ಆದರೆ ನಮ್ಮ ರಾಜಧಾನಿಯ ಕೆಲ ಸ್ಕೂಲುಗಳು ಭಿಕ್ಷುಕರನ್ನು ತಯಾರು ಮಾಡುವ 'ಫ್ಯಾಕ್ಟರಿ' ಗಳಾಗಿವೆ. ಸ್ಕೂಲಿನ ಹೆಡ್ ಮಾಸ್ಟರುಗಳೇ ಹುಡುಗರಿಗೆ ಬಡತನದ ಶಿಫಾರಸು ಪತ್ರವನ್ನು ಕೊಟ್ಟು ಹುಡುಗರನ್ನು ಭಿಕ್ಷೆ ಬೇಡಲು ಕಳುಹಿಸುತ್ತಾರೆ. ಅದೂ ಸ್ಕೂಲುಗಳಲ್ಲಿ ಕಲಿಸಬೇಕಾದ ವಿದ್ಯೆಗಳಲ್ಲಿ ಒಂದಾಗಿಂಬೇಕು!

ಂ ಂ

ಎಲ್ಲಾ ವ್ಯಾಪಾರಗಳಿಗೂ ಸಹಕಾರ ಸಂಘಗಳಿವೆ. 'ಜೂಜುಗಾರ' ರ ಸಹಕಾರ ಸಂಘವಿಲ್ಲವೇಕೆ? ಎಂಬುದು ಒಂದು ಪ್ರಶ್ನೆ ಬಂದಿದೆ. ಅದನ್ನೂ ಮಾಡಬಹುದು, ಮಾಡುವದರಿಂದ ಜೂಜುಗಾರತನಕ್ಕೆ ಒಳ್ಳೇ ಉತ್ತೇಜನ ದೊರೆಯುತ್ತೆ. ಸಧ್ಯಕ್ಕೆ ಈಗಿರುವ ಕೆಲ ಸಹಕಾರ ಸಂಘಗಳೇ ಜೂಜಿಗೆ ಬೇಕಾದಷ್ಟು ಪ್ರೋತ್ಸಾಹ ಮಾಡುತ್ತಿವೆ. ರಾಜಧಾನಿಯ ಸಿಟಿ ಕೋಆಪರೇಟಿವ್ ಬ್ಯಾಂಕಿನಲ್ಲಿ 'ಇಲಸ್ಟ್ರೇಟೆಡ್ ವೀಕ್ಲಿಯ ಕಾಂಪಿಟೆಷ್ನ್ ಕೂಪನ್' ಗಳನ್ನು ಸುಲಭ ಬೆಲೆಗೆ ಮಾರುತ್ತಾರಂತೆ. ಲಾಭಗಳಿಸಲು ವ್ಯಾಪಾರವೂ ಆಯಿತು, ಜೂಜಿಗೆ ಪ್ರೋತ್ಸಾಹವೂ ಆಯಿತು. ಸಹಕಾರವೆಂದರೆ ಇನ್ನೇನು?

ಂ ಂ

ಈ ವಾರದ ಕಥೆ—

ಯ ತಿ — ರ ತಿ

(ಕಳೆದ ಸಂಚಿಕೆಯಿಂದ ಮುಂದುವರಿದುದು)

" ಹಾಗೆಯೇ ಆಗಲಿ " ಅನ್ನುತ್ತಾ ಬೈರಾಗಿಯು ಕಡೆ ನೋಡಿ, ನಡುವೆಗೆ ಪಕ್ಕದಲ್ಲಿದ್ದ ತನ್ನ ಮಲಗುವ ಕೋಣೆಯೊಳಕ್ಕೆ ಸರಸರನೆ ಹೋಗಿ ಒಂದು ಹಗ್ಗದ ಹೆಣಿಗೆಯ ಮಂಚವನ್ನು ತಂದು ನಡುವೆಯಲ್ಲಿ ಹಾಕಿ ಅದಂವೇಲೆ ಜಂಜಾನವನ್ನು ಹಾಸಿ ತಲೆದಿಂಬನ್ನು ಇಟ್ಟು ಹಾಸಿಗೆಯನ್ನು ಸಿದ್ಧಪಡಿಸಿದಳು ಸೀತಾಲಕ್ಷ್ಮಮ್ಮ.

ಮಂಚದ ಮೇಲೆ ಮಲಗಿ ಬೈರಾಗಿಗೆ ಹತ್ತು ವರ್ಷಗಳಾಗಿತ್ತು.

' ಮಂಚದ ಮೇಲೆ ಮಲಗೋಣವಾಗಲಿ ' ಎಂದು ಶಾಸ್ತ್ರಿಗಳು ಬೈರಾಗಿಗೆ ಹೇಳಿದರು.

' ಜೈ ಭಗವಾನ್ ' ಎಂದು ಅನ್ನುತ್ತಾ ಬೈರಾಗಿಯು ಮಂಚದ ಮೇಲೆ ಕುಳಿತನು.

ತಂಗಾಳಿಯು ಬೀಸಲಾರಂಭಿಸಿತು. ಶಾಸ್ತ್ರಿಯು ಮಲಗುವಕೋಣೆಯೊಳಗೆ ಹೊಕ್ಕನು.

ಅಡಿಗೆಮನೆಯಿಂದ ಸೀತಾಲಕ್ಷ್ಮಮ್ಮನು ' ತಾಂಬೂಲವನ್ನು ಹಾಕಿಕೊಳ್ಳುವುದಿಲ್ಲವೇ ' ಎಂದು ಕೇಳಿದಳು.

' ಸ್ವಾಮಿ ತಾಂಬೂಲ ' ಎಂದು ಶಾಸ್ತ್ರಿಯು ಬೈರಾಗಿಯನ್ನು ಕೇಳಲು ' ನನಗೆ ಬೇಡ ' ಎಂದನು ಬೈರಾಗಿ.

' ಸ್ವಾಮಿಯವರಿಗೆ ಬೇಡವಂತೆ ' ಎಂದು ಶಾಸ್ತ್ರಿಯು ಹೆಂಡತಿಗೆ ಕೇಳಿಸುವಂತೆ ಸ್ವಲ್ಪ ಗಟ್ಟಿಯಾಗಿ ಹೇಳಿದನು.

ಅಂದರೆ ತನಗೆ ಬೇಕಾಗಿರಬಹುದು ಎಂದುಕೊಂಡನು ಬೈರಾಗಿ.

ಸ್ವಲ್ಪ ಹೊತ್ತಿಗೆ ಮಲ್ಲಿಗೆ ಹೂವಿನ ವಾಸನೆಯು ಬೈರಾಗಿಯ ಮೂಗಿಗೆ ಹೊಡೆಯಿತು. ತಲೆಯನ್ನೆತ್ತಿ ನೋಡಿದನು. ಸೀತಾಲಕ್ಷ್ಮಮ್ಮನು ತಲೆಯ ತುಂಬಾ ಮಲ್ಲಿಗೆ ಹೂವನ್ನು ಮುಡಿದುಕೊಂಡು ಕೈಯಲ್ಲಿ ತಾಂಬೂಲದ ತಟ್ಟೆಯನ್ನು ಹಿಡಿದುಕೊಂಡು ಶಯ್ಯಾಗೃಹದೊಳಕ್ಕೆ ಪ್ರವೇಶಿಸುತ್ತಿದ್ದಳು. ಬೈರಾಗಿಯು ಕಣ್ಣನ್ನು ಮುಚ್ಚಿಕೊಂಡನು.

ಹಗಲೆಲ್ಲಾ ಅವಳ ಮುಖದಲ್ಲಿ ಕಾಣದಿದ್ದ ಒಂದು ನೂತನ ಅಂದವು ಬೈರಾಗಿಗೆ ಕಾಣಬಂದಿತು. ಗಂಡಹೆಂಡರು ತಾಂಬೂಲವನ್ನು ಹಾಕಿಕೊಳ್ಳುತ್ತಿದ್ದರು.

ಬೆಳಿಗ್ಗೆ ನಿದ್ರೆಯಿಂದೆದ್ದಾಗಿನಿಂದ ಇದುವರೆಗೂ ಅಷ್ಟವೇ ಅಲ್ಲವೇ ಪಾಪ! ಈಗ ಆ ದಂಪತಿಗಳಿಗೆ ಏಕಾಂತವೂ, ಒಬ್ಬರೊಂದಿಗೆ ಒಬ್ಬರು ಮಾತಾಡಿಕೊಳ್ಳುವಿಕೆಯೂ ! ಹೀಗೆ ಆಲೋಚಿಸಲಾರಂಭಿಸಿದನು ಬೈರಾಗಿ.

ಶಯ್ಯಾಗೃಹದಲ್ಲಿ ಗಂಧದ ಕಡ್ಡಿಗಳನ್ನು ಹಚ್ಚಿದಳು ಸೀತಾಲಕ್ಷ್ಮಮ್ಮ. ಹೋರೆಂದು ಬೀಸುತ್ತಿದ್ದ ಗಾಳಿಯೊಂದಿಗೆ ಮಲ್ಲಿಗೆ ಹೂವುಗಳ ವಾಸನೆಯೂ, ಗಂಧದಕಡ್ಡಿಯ ವಾಸನೆಯೂ ನಡುವೆಯೊಳಕ್ಕೆ ಕೂಡಾ ಬಂದಿತು.

ಹಗಲು ತಾಪು ಪಟ್ಟ ಕಷ್ಟವನ್ನು ಗಂಡ ಹೆಂಡರು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿರಬಹುದು—ಎಂದಂದುಕೊಂಡನು ಬೈರಾಗಿ.

ಹೊರಗೆ ಮಳೆಯು ಆರಂಭಿಸಿತು. ನಿಮಿಷ ನಿಮಿಷಕ್ಕೆ ಹೆಚ್ಚುತ್ತಿತ್ತು.

ಬೈರಾಗಿಗೆ ಮಂಚದಮೇಲೆ ನಿದ್ದೆ ಬರಲಿಲ್ಲ. ಹೊರಗೆ ಗುಡುಗಿನ ಶಬ್ದ, ಒಳಗೆ ಕಿಲಿಕಿಲಿ ಎಂದು ಸೀತಾಲಕ್ಷ್ಮಮ್ಮನು ನಗುವ ಧ್ವನಿ.

' ಏನು ಮಾತನಾಡಿಕೊಳ್ಳುತ್ತಿದ್ದಾರೆ ' ಎಂಬ ವಿಷಯದಲ್ಲಿ ಬೈರಾಗಿಗೆ ಬಹಳ ಕುತೂಹಲವಾಯಿತು. ಗಂಡಹೆಂಡರು ಮಲಗುವ ಕೋಣೆಯಲ್ಲಿ ಏನು ಹೇಳಿಕೊಳ್ಳುತ್ತಿರುವರು ?

ಬೆಳಿಗ್ಗೆ ಎದ್ದಾಕ್ಷಣದಿಂದ ಸ್ತ್ರೀ ಪುರುಷರು ಅವಸ್ಥೆಪಡುವದು ಇದಕ್ಕಾಗಿಯೇ ? ಆ ಬಿಸಿನೀರಿನ ಸ್ನಾನಕ್ಕಿಂತ, ಆ ಮೃಷ್ಟಾನ್ನ ಭೋಜನಕ್ಕಿಂತ ಈ ದಂಪತಿಗಳನ್ನು ಪರಸ್ಪರ ಆಕರ್ಷಿಸುವಂತೆ ಮಾಡಿ, ಒಬ್ಬರಿಗಾಗಿ ಎರಡನೆಯವರು ಶ್ರಮಪಡುವಂತೆ ಮಾಡುವದು ಈ ಶಯ್ಯಾಗೃಹವಲ್ಲವೇ !

ಬೈರಾಗಿಗೆ ಬಹಳ ವಿಚಿತ್ರವೆನಿಸಿತು. ಇನ್ನು ಹೆಚ್ಚು ಹೊತ್ತು ಅಲ್ಲಿ ಇರಲಾಗಲಿಲ್ಲ. ಆ ಗಂಡಹೆಂಡರು ಅನುಭವಿಸುವ ಸುಖವು ತನ್ನನ್ನೂ ಆಕರ್ಷಿಸಿದಲ್ಲಿ !

ಮಳೆಯು ಬಿದ್ದು ಬಿದ್ದು ತನ್ನಷ್ಟಕ್ಕೆ ತಾನೆ ನಿಂತಿತು. ಆಕಾಶದಲ್ಲಿ ನಕ್ಷತ್ರಗಳು ಕಾಣಬಂದವು.

ಶಬ್ದವಾಗದಂತೆ ಬೀದಿಯಬಾಗಿಲನ್ನು ತೆಗೆದು ಸೂರ್ಯೋದಯವಾಗಲು ಇನ್ನೂ ಒಂದೂಪರೆ ಝಾವವಿರುವಾಗಲೇ, ಯಾರಿಗೂ ಹೇಳದೆ ಹೊರಟುಹೋದನು ಬೈರಾಗಿ.

ಬೆಳಿಗ್ಗೆಯಾದನಂತರ ಮನೆಯಲ್ಲಿಯ ಸಾಮಾನುಗಳಲ್ಲಿ ಯಾವುವೂ ಹೋಗಲಿಲ್ಲವೆಂಬುದನ್ನು ನೋಡಿಕೊಂಡನಂತರ ' ದೇವರೇ ಆ ರೂಪದಲ್ಲಿ ಬಂದಿದ್ದನೇನೋ ' ಎಂಬಳು ಸೀತಾಲಕ್ಷ್ಮಮ್ಮ. [ಓಂ]

ಒಂದು ಕಥೆ

ದೋ ಷಿ ಯು ಯಾ ರು ?

" ಹೇಗಾದಂತಾಗಲಿ ಸಾಕ್ಷ್ಯವನ್ನು ಸಂಪಾದಿಸಬೇಕು. ಪೋಲೀಸು ಸೂಪರಿಂಟಿಂಡೆಂಟರು ಇಲ್ಲಿಗೆ ಬಂದಿರುವಾಗಲೇ ಇಂಥಾ ಕ್ರೂರ ಕೃತ್ಯವು ನಡೆದಿರುವದರಿಂದ ಅದರಕಾರಣ ಕರ್ತರನ್ನು ಕಂಡು ಹಿಡಿಯದಿದ್ದಲ್ಲಿ ನಮ್ಮ ಕೆಲಸವನ್ನು ಉಳಿಸುಕೊಳ್ಳುವ ಹಾಗಿಲ್ಲ" ಎನ್ನುತ್ತಾ ಕೈಯಲ್ಲಿದ್ದ ಅರ್ಧ ಸುಟ್ಟುಹೋದ ಚುಟ್ಟಾವನ್ನು ಮುಂದಿನ ಹಲ್ಲುಗಳಿಂದ ಕಚ್ಚುತ್ತಾ, ತನ್ನ ಎದುರಿನಲ್ಲಿ ಕುಳಿತಿದ್ದ ಹೆಡ್ ಕಾನ್ಸ್ಟೇಬಲಿನ ಕಡೆ ನೋಡಿದನು ಸಬ್-ಇನ್ಸ್ಪೆಕ್ಟರ್ ಶ್ಯಾಮರಾವು.

" ಹೌದು ಸರ್ ; ತಮಿಗರಿಕ್ಕೆ ನನಗೆ ಹೆಚ್ಚು ಭಯವಾಗಿದೆ. ಆ ದಿನ ನಾನು ನೈಟ್ ಡ್ಯೂಟಿಯಲ್ಲಿ ಕೂಡಾ ಇದ್ದೆ. ನನ್ನ ಸೋಟು ಬುಕ್ಕು ತನಿಖೆ ಮಾಡಿದಾಗ ಆ ವಿಷಯವು ಹೊರಬೀಳುವದು. ನೈಟ್ ಡ್ಯೂಟಿಯಲ್ಲಿ ನಾನು ಇದ್ದರೂ ಇಂಥಾ ಘೋರಕೃತ್ಯವು ನಡಿದಿದೆಯೆಂದರೆ ನನ್ನ ಸಂಜಾಯಿಷಿಯನ್ನು ಕೇಳಿ ತೆಗೆದುಕೊಂಡು ಡಿಸ್ಮಿಸ್ ಮಾಡಬಹುದೆಂಬ ಭಯವುಂಟಾಗಿದೆ " ಎಂದನು ಹೆಡ್ ಕಾನ್ಸ್ಟೇಬಲ್.

ಆಗ ಸಬ್-ಇನ್ಸ್ಪೆಕ್ಟರ್—ಅದಕ್ಕೆ ಸಂದೇಹವೇನು ಈ ದೊರೆ ಬಹಳ ಸ್ಟ್ರಿಕ್ಟು ಎಂದು ಕೇಳಿರುವೆನು.

ಹೆ. ಕಾಂ.—ನಾನು ಹಾಗೇ ಕೇಳಿರುವೆನು. ಮನೆಯಲ್ಲಿ ನಾಲ್ಕು ಮಕ್ಕಳಿರುವರು. 25 ವರ್ಷ ಸರ್ವಿಸ್ಸು ಆಗಿದೆ. ಸಾವಿಕಾರು ಖೂನೀ ಕೇಸುಗಳನ್ನು ಪತ್ತೆ ಮಾಡಿದೇನೆ. ಆದರೆ ಇದುವರೆಗೂ ಇಂಥಾ ಕಷ್ಟದಲ್ಲಿ ಬಿದ್ದಿರಲಿಲ್ಲ.

ಸ. ಇ. —ಅದಕ್ಕಾಗಿಯೇ ಸ್ವಲ್ಪ ಹುಶಾರಾಗಿ ಕೆಲಸ ಮಾಡಬೇಕು. ನಾನು ನಾಳೆ ಕ್ಯಾಂಪಿಗೆ ಹೋಗುತ್ತೇತೆ. ನಾಳೆದ್ದು ಬೆಳಿಗ್ಗೆಗೆ ಬಂದು ಬಿಡುತ್ತೇನೆ. ಇಷ್ಟರಲ್ಲಿ ಏನಾದರೂ ಪತ್ತೆ ಮಾಡು.

ಸೆಲ್ಯೂಟು ಮಾಡಿ ಹೆಡ್ ಕಾನ್ಸ್ಟೇಬಲ್ಲು ಹೊರಟುಹೋದೆನು. ಶ್ಯಾಮರಾವು ಕೂತುಕೊಂಡು ದೀರ್ಘವಾಗಿ ಆಲೋಚಿಸಲಾರಂಭಿಸಿದನು.—

ಈಗ್ಯೆ ಎರಡು ವರ್ಷಗಳಾದವು ಆತನು ಸರ್ವಿಸ್ಸಿನಲ್ಲಿ ಸೇರಿ. ಈ ಖೂನಿ ಕೇಸು ಆತನ ಸರ್ವಿಸ್ಸಿನಲ್ಲಿ ನಾಲ್ಕನೆಯದು, ಪ್ರೊಬೇಷನ್ನಿನಲ್ಲಿರುವಾಗ ಬಹಳ ಕೇಸುಗಳೂ ಬಂದರೂ ಸೀನಿಯರ್ ಇನ್ಸ್ಪೆಕ್ಟರು ಹೋಗಿ ಏಚಾರಿಸುತ್ತಿದ್ದನು ಸ್ಟೇಷನ್ ಛಾರ್ಜಿಗೆ ಸ್ವತಂತ್ರವಾಗಿ ತೆಗೆದುಕೊಂಡ ಮೇಲೆ ಬಂದ ಕೇಸುಗಳಲ್ಲಿ ಇದು ನಾಲ್ಕನೇದು. ಇದಕ್ಕೆ ಹಿಂದೆ ನಡೆದ ಮೂರು ಕೇಸುಗಳಲ್ಲಿ ಎರಡರಲ್ಲಿ ತಪ್ಪಿತಸ್ಥರು ಆಗಾಗಲೇ ಹಿಡಿಯಲ್ಪಟ್ಟರು. ಪಟೇಲನು ಕಳುಹಿಸುವ ರಿಪೋರ್ಟಿನೊಂದಿಗೆ ತಪ್ಪಿತಸ್ಥರನ್ನೂ ಸಾಕ್ಷಿಗಳನ್ನೂ ಕೂಡ ಕಳುಹಿಸಿದನು.

ಆ ಸಾಕ್ಷಿಗಳು ಮ್ಯಾಜಿಸ್ಟ್ರೇಟರ ಹತ್ತಿರದಲ್ಲಾಗಲಿ ಸೆಷನ್ ಜಡ್ಜರ ಎದುರಿನಲ್ಲಾಗಲಿ ಏನು ಹೇಳಬೇಕೋ ಅದನ್ನು ಪಾಠಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಹಾಕಿಸಿದ್ದನು. ಮೂರನೆಯ ಕೇಸಿನಲ್ಲಿ ಯಾರನ್ನೋ ಅರೆಸ್ಟು ಮಾಡಿ ಸಾಕ್ಷ್ಯವನ್ನು ಸೃಷ್ಟಿಸಿದನಾಗಲಿ ಆ ಸಾಕ್ಷಿಗಳಲ್ಲಿ ಯಾರೂ ಸುಳ್ಳು ಹೇಳಲಿಲ್ಲ. ಕೇಸು ಬಲವಾಗಿಲ್ಲವೆಂದು ಸೆಷನ್ ಜಡ್ಜಿಯು ಕೇಸು ಡಿಸ್ಮಿಸ್ ಮಾಡಿದ್ದನು. ಇದೇ ನಾಲ್ಕನೆಯ ಕೇಸು. ನಾಲ್ಕು ದಿನಗಳ ಹಿಂದೆ ಪೋಲೀಸು ಸೂಪರಿಂಟೆಂಡೆಂಟು ಸ್ಟೇಷನ್ ತನಿಖೆ ಮಾಡುತ್ತಾ ಆ ಊರಿನಲ್ಲಿರುವಾಗಲೇ ಅಲ್ಲಿ ಹಿರಿಯವಾಸಿಯಾಗಿದ್ದ ರಾಮರೆಡ್ಡಿಯನ್ನು ಯಾರೋ ಕತ್ತಿಯಲ್ಲಿ ಇರಿದು ಕೊಂದು ಹಾಕಿದರು. [ಸಷೇಷ.

ಸತ್ಯವಾದಿ

ಪ್ರತಿಬಂಧನೆ

ಚುನಾವಣಾ ಪ್ರಚಾರ ಕಾರ್ಯದ ಪ್ರಾರಂಭೋತ್ಸವವನ್ನು ನೆರವೇರಿಸಲು ಆಂಧ್ರದೇಶದಿಂದ ಆಹ್ವಾನಿತರಾದ ಶ್ರೀ ಗೋಪಾಲರೆಡ್ಡಿ ಮತ್ತು ಶ್ರೀ ಕಾಳೇಶ್ವರರಾವ್‌ರವರು ಉಪನ್ಯಾಸಗಳನ್ನು ಕೊಡದಂತೆ ಕೋಲಾರ ಜಿಲ್ಲೆಯಲ್ಲಿಯೂ ಬೆಂಗಳೂರಿನಲ್ಲಿಯೂ ಅವರುಗಳ ಮೇಲೆ ಪ್ರತಿಬಂಧಕಾಜ್ಞೆಯು ಜಾರಿ ಮಾಡಲ್ಪಟ್ಟಿತು. ಈಚೆಗೆ ಸಂಸ್ಥಾನದಲ್ಲಿ ಎಲ್ಲಿಯೂ ರಾಜಕೀಯವೇ ಆಗಲಿ ಇನ್ನಿತರ ವಿಧದ್ದೇ ಆಗಲಿ ಯಾವ ಜಳವಳಿಯೂ ನಡೆಯುತ್ತಾ ಇಲ್ಲ. ಹೀಗಿರುವಾಗ ಜಿಲ್ಲಾಧಿಕಾರಿಗಳು ಅದರಲ್ಲೂ ಚುನಾವಣಾ ಪ್ರಚಾರದ ಭಾಷಣಗಳಿಗೆ ಪ್ರತಿಬಂಧಕಾಜ್ಞೆಗಳನ್ನು ಹೊರಡಿಸುವುದು ಕೇವಲ ಅನವಶ್ಯಕವಾದುದು.

ಶ್ರೀ ರೆಡ್ಡಿಯವರೂ ಶ್ರೀ ಕಾಳೇಶ್ವರರಾಯರೂ ಮದ್ರಾಸಿನ ಮಂತ್ರಿಮಂಡಲದಲ್ಲಿದ್ದು ಸರಕಾರದ ಆಡಳಿತ ಯಂತ್ರವನ್ನು ಯಶಸ್ವಿಯಾಗಿ ನಡೆಸಿದವರು. ಅಂತಹ ಜವಾಬ್ದಾರಿಯನ್ನರಿತ ಮಾನ್ಯ ಗೃಹಸ್ಥರ ಭಾಷಣವು ಶಾಂತಿ ಭಂಗವನ್ನುಂಟುಮಾಡುತ್ತದೆಂದು ಹೇಳುವದರಲ್ಲಿ ಔಚಿತ್ಯವಿಲ್ಲ. ಶ್ರೀ ರೆಡ್ಡಿಯವರೂ ಶ್ರೀ ಕಾಳೇಶ್ವರರಾಯರೂ ಇಲ್ಲಿಯ ವಿಶ್ವವಿದ್ಯಾನಿಲಯದಲ್ಲಿಯೂ ಸುಬ್ಬರಾಯನಕೆರೆ ಮೈದಾನದಲ್ಲಿಯೂ ಭಾಷಣಗಳನ್ನು ಮಾಡಿರುತ್ತಾರೆ. ಯಾವ ಪ್ರಳಯವೂ ಉಂಟಾಗಲಿಲ್ಲ. ಬೆಂಗಳೂರಿನಲ್ಲಿಯೂ ಭಾಷಣಮಾಡಿರುತ್ತಾರೆ. ಅಲ್ಲಿ ಪ್ರಪಂಚವು ತಲೆಕೆಳಕಾಗಿರುವುದಾದರೂ ಏನು ? ಎಲ್ಲವೂ ಶಾಂತರೀತಿಯಿಂದಲೇ ನಡೆಯುತ್ತಿರುವಾಗ ಅಧಿಕಾರಿಗಳು ಜನರ ಮನಸ್ಸನ್ನು ಕದಡುವುದು ಸರಿಯಲ್ಲ.

ಪ್ರಜಾಪ್ರತಿನಿಧಿಸಭೆ ನ್ಯಾಯವಿಧಾಯಕ ಸಭೆ, ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್‌ಬೋರ್ಡ್ ಮೊದಲಾದ ಸಂಸ್ಥೆಯಲ್ಲಿಯೂ ಪಕ್ಷಪ್ರತಿಪಕ್ಷಗಳು ಇರಲೇಬೇಕು. ದೇಶದ ಹಿತದ ದೃಷ್ಟಿಗಾಗಿ ಇರಬೇಕಾದುದು ಅಗತ್ಯವು. ಪ್ರತಿಯೊಂದು ಪಕ್ಷದವರೂ ತಮ್ಮತಮ್ಮ ಪಕ್ಷಕ್ಕೆ ಬಹುಮತ ಸಿಕ್ಕಬೇಕೆಂಬುದಾಗಿ ಪ್ರಯತ್ನಿಸುತ್ತಾರೆ. ಕಾಂಗ್ರೆಸ್ಸಿನವರೂ ಕೂಡ ಒಂದು ರಾಜಕೀಯ ಪಕ್ಷವು. ತಮ್ಮ ಪಕ್ಷದ ಉಮೇದುವಾರರೇ ಹೆಚ್ಚು ಮಂದಿ ಚುನಾಯಿತರಾಗಬೇಕೆಂದು ಅದಕ್ಕಾಗಿ ಅವರು ಪ್ರಚಾರವನ್ನು ಮಾಡುವುದಾದರೆ ಅದರಲ್ಲಿ ತಪ್ಪೇನಿದೆ ? ಚುನಾವಣಾ ಪ್ರಚಾರ ಕಾರ್ಯವೇ ಶಾಂತಿಭಂಗವನ್ನುಂಟುಮಾಡುವುದಾದರೆ ಚುನಾವಣೆಗಳು ಪ್ರಳಯಕ್ಕಿಂತಲೂ ಭಯಂಕರವಾದುವುಗಳೆಂದು ಹೇಳಲು ಅಡ್ಡಿಯಿಲ್ಲ.

ನಿಯಮಬದ್ಧವಾಗಿ ಶಿಸ್ತಿನಿಂದ ಕೂಡಿ ಯಾವ ಪಕ್ಷದವರು ಬೇಕಾದರೂ ಪ್ರಚಾರ ಕಾರ್ಯವನ್ನು ನಡೆಸಲಿ. ಸರ್ಕಾರದವರು ಅವರನ್ನು ಆತಂಕಪಡಿಸಕೂಡದು. ಈಗ ಇರುವ ಅಥವಾ ಮುಂದೆ ಬರಲಿರುವ ಶಾಸನಸಭಾ ಪದ್ಧತಿಯಿಂತೆ ನಾವು ನೋಡುವುದಾದರೆ, ಪ್ರಜೆಗಳಿಗೆ ಬೇಕಾದುದೇನು ? ಅವರ ಅಭಿಪ್ರಾಯವೇನು ? ಯಾವುದು ಮಾಡಿದರೆ ಸರಿ, ಯಾವುದು ಮಾಡಿದರೆ ತೊಂದರೆ, ಎಂಬಿತ್ಯಾದಿ ವಿಷಯಗಳನ್ನು ಪ್ರಜಾಪ್ರಮುಖರ ಮುಖೇನ ತಿಳಿದುಕೊಳ್ಳುವುದೇ ಮುಖ್ಯ ಉದ್ದೇಶವು. ಅಂತಹ ಪ್ರಜಾಪ್ರಮುಖರು ತಮ್ಮ ಅಭಿಪ್ರಾಯವನ್ನು ಯಾವ ರೀತಿ ಸರ್ಕಾರದವರ ಮುಂದೆ ಇಡುತ್ತಾರೆಂಬ ವಿಷಯದಲ್ಲಿ ಜನಗಳಿಗೆ ತಿಳಿವಳಿಕೆ ಕೊಟ್ಟು ತಮ್ಮ ಅಭಿಪ್ರಾಯಕ್ಕೆ ಒಪ್ಪುವವರಿಂದ ಮತವನ್ನು ಹೊಂದಬೇಕಾಗುತ್ತದೆ. ಆದುದರಿಂದ ಪ್ರತಿಯೊಂದು ಪಕ್ಷದ ಮುಖಂಡರೂ ತಮ್ಮ ತಮ್ಮ ಪಕ್ಷದ ಅಭಿಪ್ರಾಯವನ್ನೂ ಕಾರ್ಯಕ್ರಮವನ್ನೂ ಜನಗಳಿಗೆ ತಿಳಿಸಿ ಪ್ರಚಾರ ಮಾಡುವುದು ಅಗತ್ಯವು. ಪ್ರಚಾರವನ್ನೇ ಮಾಡಕೂಡದೆಂದು ತಡೆಹಾಕಿದರೆ ಪ್ರಜಾಭಿಪ್ರಾಯವನ್ನು ಸರಕಾರದವರು ತಿಳಿದುಕೊಳ್ಳುವ ಬಗೆ ಹೇಗೆ ?

ಚುನಾವಣಾ ಪ್ರಚಾರಕಾರ್ಯವನ್ನು ನಡೆಸುವಾಗ ಭಾಷಣವನ್ನು ಮಾಡುವವರು ಮೇರೆ ತಪ್ಪಿ ವರ್ತಿಸಿದರೆ ಅಂತಹವರನ್ನು ಶಿಕ್ಷಿಸಲು ಕಾನೂನಿನಲ್ಲಿ ಬೇಕಾದಷ್ಟು ಅವಕಾಶವಿದೆ. ಸರಕಾರದವರು ಅದನ್ನನುಸರಿಸಬಹುದು. ಅದನ್ನು ಬಿಟ್ಟು ಪ್ರಚಾರ ಕಾರ್ಯಕ್ಕೆ ಭಾಷಣಗಳಿಗೇನೇ ಪ್ರತಿಬಂಧಕವನ್ನು ಉಂಟುಮಾಡಿದರೆ ಜನಗಳಲ್ಲಿ ಜಾಗೃತಿಯು ಹುಟ್ಟಿ, ಪ್ರತಿಬಂಧಕಾಜ್ಞೆಗಳೇ ಪ್ರಚಾರವನ್ನು ಮಾಡಿದಂತಾಗಿ ಎಲ್ಲೆಲ್ಲಿಯೂ ಕಾಂಗ್ರೆಸ್ ಉಮೇದುವಾರರೇ ಚುನಾವಣೆಯಲ್ಲಿ ಜಯಶೀಲರಾಗುವಂತೆ ಅವಕಾಶವಾಗುತ್ತದೆ. ಆದುದರಿಂದ ಸರ್ಕಾರದ ಅಧಿಕಾರಿಗಳು ಶಾಂತಿಯುತವಾದ ಚುನಾವಣಾ ಪ್ರಚಾರ ಕಾರ್ಯಕ್ಕೆ ಅಡ್ಡಿಯೆನ್ನುಂಟುಮಾಡುವದು ಸರಿಯಲ್ಲ.

ಜವಹರಲಾಲರಿಗೆ ೪ ವರ್ಷ ಸಜಾ

ಶ್ರೀ ಪಂಡಿತ ಜವಹರಲಾಲರು ಗೋರಕ್‌ಪುರದಲ್ಲಿ ಯುದ್ಧದಲ್ಲಿ ಭಾರತೀಯರ ಸಹಾಯ ಬೇಡಬಾರದೆಂದು ಭಾಷಣ ಮಾಡಿದರೆಂದು ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಗೆ ಒಳಪಡಿಸಲ್ಪಟ್ಟರು. 4 ವರ್ಷ ಸಜಾ ವಿಧಿಸಲಾಗಿದೆ.

ಬೆಂಗಳೂರಿನಲ್ಲಿ ಪ್ರಭುಗಳಿಗೆ ವೈಭವ ಸುಸ್ವಾಗತ

ಮೊನ್ನೆಯ ದಿವಸ ಬೆಂಗಳೂರು ನಗರವು ಸಂತೋಷಸಾಗರದಲ್ಲಿ ಮುಳುಗಿದ್ದಿತು. ಜನರ ಆನಂದವು ಹೇಳತೀರದು. ಶ್ರೀಮನ್ಮಹಾರಾಜರವರು ಅಲ್ಲಿಗೆ ತಮ್ಮ ಭೇಟಿಯನ್ನು ದಯಪಾಲಿಸಿದುದೇ ಇದಕ್ಕೆ ಕಾರಣ.

ಶ್ರೀಮನ್ಮಹಾರಾಜರು ಶ್ರೀ ಜಯ ಚಾಮರಾಜ ಒಡೆಯರವರು ರಾಜ್ಯಾಭಿಷೇಕವಾದ ನಂತರ ಬೆಂಗಳೂರಿಗೆ ದಯಮಾಡಿಸಿದುದು ಇದೇ ಪ್ರಥಮ. ಅದರಲ್ಲೂ ಸಕಲ ರಾಜವೈಭವದಿಂಗಿ ಮೆರವಣಿಗೆಯಲ್ಲಿ ಅಲ್ಲಿಯ ಪ್ರಜೆಗಳಿಗೆ ಸಂದರ್ಶನವಿತ್ತುದು ಒಂದು ವರವೆಂಬುದಾಗಿ ಎಣಿಸಲ್ಪಟ್ಟಿತು.

ಪ್ರಭುಗಳವರು ಸ್ಪೆಷಲ್ ಟ್ರೇನಿನಲ್ಲಿ ದಯಮಾಡಿಸಿದರು. ಸ್ಟೇಷನ್ ನಿರ್ವಾಣದಲ್ಲಿ ದಿವಾನರೂ, ಪುರಪ್ರಮುಖರೂ, ಸರ್ಕಾರಿ ಆಫೀಸರೂ ಸ್ವಾಗತವಿತ್ತು, ಹಾರಾತುರಾಯನ್ನರ್ಪಿಸಿದರು. ಮಿಲಿಟರಿಯ ಸಲ್ಯೂಟು ನಡೆಯಿತು. ಸಂತರ 4 ಕುದುರೆಗಳಿಂದ ಎಳೆಯಲ್ಪಟ್ಟ ಕೋಚಿನಲ್ಲಿ ಪ್ರಭುಗಳು ಒಂದು ಕಡೆಯಲ್ಲೂ, ಎದುರುಗಡೆ ದಿವಾನರವರೂ, ಕರ್ನಲ್ ದೇಶರಾಜೇ ಅರಸಿನವರೂ ಕುಳಿತು, ಮೆರವಣಿಗೆ ಹೊರಟರು. ಪ್ರಭುಗಳ ಹಿಂದೆ ಶ್ವೇತಚ್ಛತ್ರಿಯು ಹಿಡಿಯಲ್ಪಟ್ಟಿದ್ದಿತು. ಮುಂದೆ ಇಂಪೀರಿಯಲ್ ಲಾನ್ಸರ್ಸಿನವರೂ, ಹಿಂದೆ ಅಂಗರಕ್ಷಕರೂ, ಲ್ಯಾನ್ಸರ್ಸಿನವರೂ ಹೊರಟು ರೈಲ್ವೆಸ್ಟೇಷನ್ನಿನಿಂದ ಕೆಂಪೇಗೌಡ ರಸ್ತೆ ಮೂಲಕ ಸಿಟಿ ಮಾರ್ಕೆಟ್ಟಿಗೆ ಬಂದಿತು. ಅಲ್ಲಿ ಮುನಿಸಿಪಾಲಿಟಿಯವರು ಹಾಕಿದ್ದ ಸ್ಪೆಷಲ್ ಜಪ್ಪರದಲ್ಲಿ ಮುನಿಸಿಪಲ್ ಅಡ್ರೆಸ್ಸನ್ನು ಒದಲ್ಪಟ್ಟು ಒಂದು ಕ್ಯಾಸ್ಕೆಟ್‌ನಲ್ಲಿ ಒಪ್ಪಿಸಲ್ಪಟ್ಟಿತು. ಮಹಾಸ್ವಾಮಿಯವರು ಉಚಿತವಾದ ಗಂಭೀರವಾದ ಉತ್ತರವನ್ನು ದಯಪಾಲಿಸಿದರು.

ನಂತರ ಮೆರವಣಿಗೆಯು ದೊಡ್ಡಪೇಟೆ ಮಾರ್ಗವಾಗಿ ಚಿಕ್ಕಪೇಟೆ ಮೂಲಕ ರೈಲ್ವೆ ಸ್ಟೇಷನ್ ಬಳಿ ಇರುವ ತೋಟದಪ್ಪನವರ ಛತ್ರದ ಬಳಿ ಬಂದು, ಅಲ್ಲಿಂದ ಪ್ರಭುಗಳವರು ಮೋಟಾರಿನಲ್ಲಿ ಅರಮನೆಗೆ ದಯಮಾಡಿಸಿದರು.

ದಾರಿಯುದ್ದಕ್ಕೂ ಜಪ್ಪರಗಳು ನಿರ್ಮಿಸಲ್ಪಟ್ಟಿದ್ದವು, ತೋರಣಾತುರಾಯಿಗಳು ಅರ್ಪಿಸಟ್ಟವು. ಪ್ರಜೆಗಳ ಆನಂದ ಹೇಳತೀರದು.

ಪರಮಾತ್ಮನು ಪ್ರಭುಗಳವರಿಗೆ ಆಯುರಾರೋಗ್ಯವನ್ನು ದಯಪಾಲಿಸಿ ಬಹು ಕಾಲ ರಾಜ್ಯಾಡಳಿತವನ್ನು ನಡೆಸಿಕೊಂಡುಬಂದು ಪ್ರಜೆಗಳನ್ನು ಸುಖವಾಗಿ ಕಾಪಾಡಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಈ ವಾರದ ಭವಿಷ್ಯ

ಜ್ಯೋತಿಷ್ಕರ್ — ಕೃಷ್ಣಾಪುರದ
ಶೇಟ್ಲೂರು ವೆಂಕಟೆನರಸಿಂಹಾಚಾರ್
ಬೃಹಸ್ಪತಿ ಜ್ಯೋತಿಷಾಲಯ,
ಹಳೇ ಪೋಸ್ಟಾಫೀಸು ರೋಡು, ಮೈಸೂರು

ಮೇಷ

ತಾ || 6 7 8 9 ಲಾಭಾಧಿಕ ಇಷ್ಟ ಕಾರ್ಯ ಕೈಗೂಡುವಿಕೆ ದೇವತಾಕಾರ್ಯದಲ್ಲಿ ಆಸಕ್ತಿ ರಾಜಕೀಜನರಿಂದ ಕಾರ್ಯಾನುಕೂಲತೆ ಸತ್ಕಥಾಶ್ರವಣ ಗೃಹಾಭಿವೃದ್ಧಿ ಧನಧಾನ್ಯವೃದ್ಧಿ ಬಾಕಿ ದಿನಗಳಲ್ಲಿ ಕೆಲವರಲ್ಲಿ ಮನಸ್ತಾಪ ವ್ಯಾಪಾರದಲ್ಲಿ ನಷ್ಟ ಚಂಚಲತೆ ಅನಾರೋಗ್ಯ ಸಹಸ್ರನಾಮ ಪಾರಾಯಣ ಮಾಡಿ ಎಳ್ಳು ದಾನ ಕೊಡಿ ಕ್ಷೇಮ.

ವೃಷಭ

ತಾ || 6 7 ವಿರೋಧಫಲ ಅಪಕೀರ್ತಿ ಕಾರ್ಯಭಂಗ ಉತ್ಸಾಹ ಕಡಮೆ ನಿಷ್ಠೂರ ಅನಾರೋಗ್ಯ. ಹುಡುಗರಿಗೆ ಹಾಲು ತೆಗೆದು ಕೊಡಿ ಶುಭ. ಬಾಕಿ ದಿವಸಗಳಲ್ಲಿ ಶುಭವಾರ್ತೆ ವಾಹನಫಲ ಆಭರಣಾಭಿವೃದ್ಧಿ ಸ್ವಪರಜನ ಸಹಾಯ ಲಾಭ.

ಮಿಥುನ

ಈ ವಾರ್ತೆನಿಮಗೆ ಲಾಭಕಾರ್ಯ ಮಂಗಳಕರವಾದ ಉತ್ಸವ ಅಧಿಕಾರವರ್ಗದವರಿಂದ ಲಾಭ ಬಂಧುಮಿತ್ರ ಸಮಾಗಮ ಕೀರ್ತಿ. ತಾ || 7 8 ಕಾರ್ಯದಲ್ಲಿ ನಿಧಾನತೆ ವ್ಯಯಾಧಿಕ ಸ್ತ್ರೀ ವಿರೋಧ ಅನಾರೋಗ್ಯ. ಲಕ್ಷ್ಮೀ ಪೂಜೆ ಮಾಡಿಸಿ ಶುಭ.

ಕರ್ಕಾಟಕ

ಪುಣ್ಯಕಾರ್ಯಾನುಕೂಲತೆ ಮಂತ್ರಸಿದ್ಧಿ ಶುಭಕಾರ್ಯಾದಿ ಸಂತೋಷ ರಾಜಕೀ ಜನರಿಂದ ಮನ್ನಣೆ ಧನಧಾನ್ಯಾಭಿವೃದ್ಧಿ ಸ್ವಪರಜನ ಸಹಾಯ ಸುಖಾಧಿಕ. ತಾ || 8 9 ಸ್ವಕೀಯರಲ್ಲಿ ಮನಸ್ತಾಪ ಚಂಚಲತೆ. ಲಕ್ಷ್ಮಿ ಮತ್ತು ಗೌರಿಗೆ ಅರ್ಚನೆ ಮಾಡಿಸಿ ಕ್ಷೇಮ.

ಸಿಂಹ

ಕಾರ್ಯಲಾಭ ಧನಧಾನ್ಯಸೌಖ್ಯ ಬಂಧುಪ್ರೀತಿ ಶತ್ರುಂಜಯ ಅಧಿಕಾರಿವರ್ಗದಿಂದ ಮರ್ಯಾದೆ ಶುಭಕಾರ್ಯಾಧಿಕ ದೇವರಪೂಜೆಯಲ್ಲಿ ಆಸಕ್ತಿ. ಶಾ || 11 12 ಕೆಲವರಲ್ಲಿ ಮನಸ್ತಾಪ ವ್ಯಾಪಾರದಲ್ಲಿ ನಷ್ಟ ಸಂಚಾರಾಧಿಕ, ತುಳಸೀ ಪೂಜೆಮಾಡಿಸಿ ಉತ್ತಮ ಫಲ.

ಕನ್ಯಾ

ತಾ || 6 7 12 ಸುಖ ಕಡಮೆ ಕೀರ್ತಿ ಭಂಗ ಮನಸ್ತಾಪ ಗೃಹದಲ್ಲಿ ಅನಾರೋಗ್ಯ. ಬ್ರಹ್ಮಚಾರಿಗೆ ಹಾಲು ತೊಗರೀಬೇಳೆ ದಾನ ಕೊಡಿ, 12 ನೇ ತಾರೀಖು ತುಳಸೀಪೂಜೆಗೆ ಸಹಾಯ ಮಾಡಿ ಕ್ಷೇಮ. ಬಾಕಿ ದಿನಗಳಲ್ಲಿ ಇಷ್ಟ ಕಾರ್ಯಸಿದ್ಧಿ ಸಜ್ಜನರ ದರ್ಶನ ಉಪಕಾರ ಉತ್ಸಾಹ ಬಂಧುಮಿತ್ರಾದಿ ಸೌಖ್ಯ, ಶುಭ.

ತುಲಾ

ತಾ || 6 ರಿಂದ 9 ರವರೆಗೆ ಸ್ತ್ರೀವಿರೋಧ ಅಪಕೀರ್ತಿ ಚಂಚಲತೆ ಧನವ್ಯಯ ಬಂಧುವಿರೋಧ ಅನಾರೋಗ್ಯ ಸರ್ಕಾರಿಕಾರ್ಯ ಮುಂದುವರಿಸುವಿಕೆ ಆದಿತ ಹೃದಯ ಪಾರಾಯಣ ಮಾಡಿ. ಗೋಧಿ ತೊಗರೀಬೇಳೆ ದಾನಮಾಡಿ ಕ್ಷೇಮ. ಬಾಕಿ ದಿನಗಳಲ್ಲಿ ಗೃಹಾಭಿವೃದ್ಧಿ ಪ್ರಯತ್ನ ಕಾರ್ಯ ಲಾಭ ಕೀರ್ತಿ ಉತ್ಸಾಹ.

ವೃಶ್ಚಿಕ

ಮನಸ್ತಾಪದಿಂದ ಧನನಷ್ಟ ಬಂಧುವಿರೋಧ ಕಾರ್ಯನಷ್ಟ ಸರ್ಕಾರಿಕಾರ್ಯ ಮುಂದೆಬೀಳುವುದು ಪಿತೃಸಂಬಂಧವಾದ ದೇಹಾಯಾಸ ಚಂಚಲತೆ ಧನವ್ಯಯ. ಸೂರ್ಯನಮಸ್ಕಾರ ಮಾಡಿ ತುಳಸೀ ಪೂಜೆ ಮಾಡಿಸಿ ಕ್ಷೇಮ. ತಾ || 8 9 ಸುಖಾಧಿಕ ಎಲ್ಲ ಅನುಕೂಲಗಳು ಲಾಭ ಕೀರ್ತಿ.

ಧನು

ತಾ || 6 7 11 12 ಶತ್ರುವೃದ್ಧಿ ಬಂಧುಮಿತ್ರರಿಗೆ ತೊಂದರೆ ಸಂಚಾರಾಧಿಕ ವ್ಯಯಾಧಿಕ ಸ್ತ್ರೀವಿರೋಧ ಸಹಜರಲ್ಲಿ ಮನಸ್ತಾಪ ಕೃಷಿ ಮೂಲ್ಕ ಧಾನ್ಯ ನಷ್ಟ ಅನಾರೋಗ್ಯ ದೀಪಾರಾಧನೆ ಮಾಡಿಸಿ ಕ್ಷೇಮ. ಬಾಕಿ ದಿನಗಳಲ್ಲಿ ಸ್ತ್ರೀಪುತ್ರ ಸೌಖ್ಯ ಭೂವ್ಯವಸ್ಥಾಯ ಫಲಸಿದ್ಧಿ ಬಂಧುಪ್ರೀತಿ ಲಾಭ ಉತ್ಸಾಹ.

ಮಕರ

ಆಶ್ರಯಸುಖ ಪೂಜ್ಯರ ದರ್ಶನ ಗೃಹ ಕೃತ್ಯಾನುಕೂಲತೆ ರಾಜಕೀ ಕಾರ್ಯ ಸುಖ ಶುಭ ಕಾರ್ಯಾಧಿಕ ಬಂಧುಮಿತ್ರ ಸಮಾಗಮ ಯಶ. ತಾ || 8 9 ಶತ್ರುಭಯ ಕಾರ್ಯಭಂಗ ಧನಧಾನ್ಯ ವ್ಯಯ ನೀಚಾಶ್ರಯ ಅನಾರೋಗ್ಯ. ಲಕ್ಷ್ಮೀಪೂಜೆಮಾಡಿಸಿ ದೇವರ ದೀಪಕ್ಕೆ ಎಣ್ಣೆ ಕೊಡಿ, ಕ್ಷೇಮ.

ಕುಂಭ

ನೀಚರಲ್ಲಿ ಮನಸ್ತಾಪ ಧಾನ್ಯನಷ್ಟ ಚಂಚಲತೆ ಸರ್ಕಾರಿಕಾರ್ಯ ಮುಂದುವರಿಸುವಿಕೆ ಅಪಕೀರ್ತಿ ಸ್ತ್ರೀವಿರೋಧ ಅನಾರೋಗ್ಯ. ತೊಗರಿಬೇಳೆ ಗೋಧುವೆ ದಾನ ಕೊಟ್ಟು, ತುಳಸಿ ಪ್ರಾರ್ಥನೆಮಾಡಿಸಿ. ಶ ಭ. ತಾ | 8 9 ಪ್ರಯತ್ನ ಕಾರ್ಯ ಸಿದ್ಧಿ, ಬಂಧುಪ್ರೀತಿ ಭೂಸ್ಥಿತಿ ವೃದ್ಧಿ.

ಮೀನ

ಕೀರ್ತಿ ಗೃಹದಲ್ಲಿ ಮಂಗಳಕಾರ್ಯ ಪುಣ್ಯ ಕಾರ್ಯ ವೃದ್ಧಿ ಸರ್ಕಾರೀಕಾರ್ಯ ಅನುಕೂಲತೆ ಗೃಹಾಭಿವೃದ್ಧಿ ಲಾಭಕಾರ್ಯ ಸತ್ಕಥಾಶ್ರವಣ ದೂರದಿಂದ ಆಹ್ವಾನ. ತಾ || 8 9 12 ಧನವ್ಯಯ ಅನಾರೋಗ್ಯ ಕಾರ್ಯಭಂಗ ನಷ್ಟ. ತಾ | 8 ಲಕ್ಷ್ಮೀಪೂಜೆ, ತಾ. 9 ದೀಪಕ್ಕೆ ಎಣ್ಣೆ ತಾ 12 ತುಳಸಿಗೆ ದೀಪೋತ್ಸವ ನಾಡಿ ಕ್ಷೇಮ.

ಮುಂದಿನ ವಾರದ ಸತ್ಯವಾದಿ ಪತ್ರಿಕೆಯನ್ನು
ಓದಲು ತಪ್ಪಿಸಿರಿ

ಇಂಡಿಯಾದೇಶಕ್ಕೆ ದ್ರೋಹವನ್ನು ನಾವು ಮಾಡಕೂಡದು

(ಶ್ರೀ|| ಜಿ. ಎಸ್. ಆರಂಡೇಲಿಂರವರು)

ಈ ದಿನಗಳಲ್ಲಿ ದೂರದೃಷ್ಟಿಯು ಅತ್ಯವಸರವು. ಎಲ್ಲಕ್ಕಿಂತ ಈಗ ಅರ್ಜೆಂಟಾಗಿ ಬೇಕಾದಿರುವ ದೃಷ್ಟಿಯು ಒಂದಿದೆ. ಬ್ರಿಟನ್ನಿನ ಕ್ಷೇಮದ ಮೇಲೆಯೇ ಪ್ರಪಂಚದ ಮುಂದಿನ ಜೀವಿತವು ಆಧಾರಪಟ್ಟಿರುವದೆಂಬುದೇ ! ಈಗ ಬ್ರಿಟನ್ನು ಪ್ರಪಂಚವೆಲ್ಲವನ್ನು ಈ ಮಹಾ ಉಪದ್ರದಿಂದ ತಪ್ಪಿಸಲು ಸಿದ್ಧವಾಗಿದೆಯೆಂಬ ಸತ್ಯವಿಷಯವನು ನಾವು ಗಮನಿಸಿ ಆ ಪ್ರಕಾರವಾಗಿ ಆಚರಿಸಬೇಕು.

ಬ್ರಿಟನ್ನಿನ ಶಕ್ತಿಯನ್ನು ತಗ್ಗಿಸುವ ಪ್ರಯತ್ನಗಳನ್ನು ಮಾಡಿದಲ್ಲಿ ನಾವೇ ನಮ್ಮ ಮೋರೆಯ ಮೇಲೆ ಉಗಳಿಕೊಂಡಂತೆ ಆಗುವದು. ಈಗ ಬ್ರಿಟನ್ನಿಗೆ ಇಂಡಿಯಾದೇಶದ ಮನಃಪೂರ್ತಿಯಾದ ಸಹಾಯವು ಅವಶ್ಯಕವೆಂಬುದು ಸತ್ಯವು ಸತ್ಯವು.

ಈಗ ಬ್ರಿಟನ್ನು ಹಿಂದೂದೇಶದ ಸ್ವಾತಂತ್ರಾಧಿಕಾರವನ್ನು ಮನಸ್ಸಿಗೆ ತಂದುಕೊಂಡು ಪ್ರವರ್ತಿಸಿದಲ್ಲಿ ಬ್ರಿಟನ್ನಿಗೆ ಹಿಂದೂದೇಶದ ಸಹಾಯವು ಲಭಿಸುವದು ಸತ್ಯವು, ಸತ್ಯವು.

ಕಾಮ್ಯವೆಲ್ಲವನ್ನು ಪ್ರೇಮಿಸುವ ಪ್ರತಿಯೊಬ್ಬರಿಗೂ ಬ್ರಿಟನ್ನಿನಿಂದ ಅಂಥಾ ಕೆಲಸವನ್ನು ಮಾಡಿಸುವದು ವಿಧಿಯೆನ್ನುವದು ಕೂಡ ಸತ್ಯವು.

ಆದರೆ ಇಂಡಿಯಾ ತನ್ನ ಕ್ಷೇಮಕ್ಕಾಗಿ ಪ್ರಪಂಚಕ್ಕಾಗಿ ಹೋರಾಡುತ್ತಿರುವ ಬ್ರಿಟನ್ನಿನ ದೃಷ್ಟಿಯನ್ನು ಒಂದು ಕ್ಷಣವಾದರೂ ತಿರುಗಿಸಲು ಸಾಹಸಮಾಡಕೂಡದು.

ಬ್ರಿಟನ್ನು ತಾನು ಜಯಪ್ರದವಾಗಿ ತನ್ನನ್ನು ರಕ್ಷಿಸಿಕೊಳ್ಳಬೇಕು. ಬ್ರಿಟನ್ನಿನ ರಕ್ಷಣೆಯ ಮೇಲೆಯೇ ಇಂಡಿಯಾದ ಪ್ರಪಂಚದ ಭವಿಷ್ಯವು ಆಧಾರಪಟ್ಟಿರುತ್ತದೆ.

ಮತ್ತು ಇಂಡಿಯಾ ತನ್ನ ರಕ್ಷಣೆಗಾಗಿ ಬ್ರಿಟನ್ನಿನ ಶತ್ರುವಿಗೆ ಪ್ರೋತ್ಸಾಹವನ್ನು ಕೊಡಕೂಡದು. ಅಂದರೆ ಶಾಸನೋಲ್ಲಂಘನೆಮೊದಲಾದವುಗಳನ್ನು ಮಾಡಕೂಡದು ಅಂಥಾವುಗಳೆಲ್ಲ ಖಂಡಿತವಾಗಿ ದೌರ್ಜನ್ಯದಲ್ಲಿ ಇಳಿಸುವವು.

ಯಾವ ಒಗೆಯಲ್ಲಿ ನೋಡಿದರೂ ಇಂಡಿಯಾ ವಿಷಯದಲ್ಲಿ ಬ್ರಿಟನ್ನು ಮಾಡಿರುವ ಕೆಲವು ಲೋಪಗಳಿದ್ದರೂ ಕಡಕನ್ನು ಎದುರುಗೊಳ್ಳುತ್ತಿರುವ ಬ್ರಿಟನ್ನಿಗೆ ಇಂಡಿಯಾ ನಿರುತ್ಸಾಹ ಮಾಡಿದಲ್ಲಿ ಆ ಲೋಪವು ಹೆಚ್ಚಿನದಾಗಿರುತ್ತದೆ.

ಹೀಗೆ ಇಂಡಿಯಾ ತನ್ನನ್ನು ತಾನೇ ಮೋಸಗೊಳಿಸುವಂತೆ ಮಾಡಿದಲ್ಲಿ ಆ ನಾಯಕರು ದೊಡ್ಡ ತಪ್ಪನ್ನು ಮಾಡಿದವರಾಗುವರು. ಇಂಡಿಯಾ ತನಿಗೆ ತಾನೇ ದ್ರೋಹಿಯಾಗುವದೇ !

ಬ್ರಿಟನ್ನಿನ ಕಡೆ ನೋಡಿ—ಶತ್ರುಗಳಿಂದ ನಾಶಗೊಳಿಸಲ್ಪಟ್ಟು ವಿಮಾನ ಯುದ್ಧಗಳಲ್ಲಿ ಬಿದ್ದುಹೋದ ಬ್ರಿಟನ್ನಿನ ಕಡೆ ನೋಡಿ ಇಂಥಾ ನಿರ್ದೋಷಿಗಳಾದ ಸಾಮಾನ್ಯ ಪ್ರಜೆಗಳಿಗೆ ವಿಪತ್ತುಂಟಾಗುವದೆಂದು ಕೆಲವು ಕಾಲದ ಹಿಂದೆಯೆ

(6 ನೇ ಪುಟವನ್ನು ನೋಡಿ)

ವೀರಪುವಾರ್ಕರರ ಗರ್ಜನೆ

ಲೇಖಕರು— ಜಿ. ಆರ್. ಮಹಾಭಲಭಟ್ಟರು
ವೇದಾಂತ ಶಿರೋಮಣಿ

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಇನ್ನು ಬೀಹಾರನ್ನು ತೆಗೆದುಕೊಳ್ಳಿರಿ. ಅಲ್ಲಿನ ಕಾಂಗ್ರೆಸ್ ಸರ್ಕಾರವು ಲೀಗಿಗುತ್ತರವಾಗಿ ಹೀಗೆಂದಿದೆ —" ಈ ಪ್ರಾಂತ್ಯದಲ್ಲಿ ಎಲ್ಲಿ ಸುಮಾರು ಶೇಕಡ 13 ಮುಸಲ್ಮಾನರಿರುವರೋ ಅಲ್ಲಿ ಅವರಿಗೆ ಕಲೆಕ್ಟರಿಯಲ್ಲಿ ಶೇಕಡಾ 28, ಶಿಕ್ಷಾವಿಭಾಗದಲ್ಲಿ ಶೇಕಡಾ 41, ಸ್ವಾಯುಕ್ತ ಶಾಸನವಿಭಾಗದಲ್ಲಿ ಶೇಕಡ 20 ಹೀಗೆ ನೌಕರಿ ಕೊಡಲಾಗಿದೆ. "

ಇನ್ನು ಮದ್ರಾಸ್ ಸರ್ಕಾರ. ಅದು ಹೀಗೆ ಹೇಳಿದೆ—" ಯದ್ಯಪಿ ಇಲ್ಲಿ ಶೇಕಡ 6 ಮುಸ್ಲಿಮರಿರುವರು. ಹಾಗಿದ್ದರೂ ಅವರಿಗೆ ಅಬ್ಕಾರಿಯಲ್ಲಿ ಶೇಕಡ 16, ಶಿಕ್ಷಾವಿಭಾಗದಲ್ಲಿ ಶೇಕಡಾ 10, ಅರಣ್ಯವಿಭಾಗದಲ್ಲಿ ಶೇಕಡಾ 15 ನೌಕರಿ ಕೊಡಲಾಗಿದೆ. "

ಏನಿವೇ ರಾಷ್ಟ್ರೀಯತೆಯೇ ? ಯೋಗ್ಯತೆಯನ್ನನುಸರಿಸಿ ನೌಕರಿಯಿತ್ತರೆ ಅದನ್ಯಾರೂ ವಿರೋಧಿಸುವದಿಲ್ಲ. ಯೋಗ್ಯತೆಯಿದ್ದರೆ ನೂರಕ್ಕೆ ನೂರರಷ್ಟು ಬೇಕಾದರೂ ನೌಕರಿ ಕೊಡಲಿ. ಈ ಜಾತಿವಿಶೇಷದಲ್ಲಿ ರಿಯಾಯಿತಿ ತೋರಿಸುವದು ಏಕೆ? ಅಲ್ಪ ಸಂಖ್ಯಾಕವಾದ ಜಾತಿಯು ಅಧಿಕಾರದ ಗ್ಯಾರಂಟಿ ಕೊಡಲು ನಾವೂ ತಯಾರಿರುವೆವು ಆದರೆ ಬಹುಮತವಾದ ಜಾತಿಯು ಹಕ್ಕಿನ ಮೇಲೆ ಕೊಡಲೀಯೇಟು ಕೊಟ್ಟು, ಹೀಗೆ ಸ್ವೇಚ್ಛೆಯಿಂದ ವರ್ತಿಸುವದನ್ನು ನಾನು ಮೈನಾರಿಟಿ ಗ್ಯಾರಂಟಿ ಎಂದು ಹೇಳಲಾರೆನು.

ರಾಷ್ಟ್ರೀಯತೆಯ ಹೆಸರಿನ ಮೇಲೆ ಭಾಷೆಯ ಹನನವೂ ನಡೆಯುತ್ತಿದೆ ರಾಷ್ಟ್ರ ಭಾಷೆಯು ಹಿಂದಿಯಿಂದ ಈಗ ಹಿಂದದಸ್ತಾನಿಯಾಯಾಯಿತು. ಸರ್ವಶ್ರೇಷ್ಠ ವೈಜ್ಞಾನಿಕ ಲಿಪಿ ಎನಿಸಿದ ದೇವನಾಗರಿಯ ಸ್ಥಾನದಲ್ಲಿ ಉರ್ದು ಅಥವಾ ರೋಮನ್ ಲಿಪಿಯನ್ನು ತರಲು ಯತ್ನವಾಗುತ್ತಿದೆ.

ಇನ್ನು ಮುಸಲ್ಮಾನ್ ಪ್ರಭಾತವಾದ ಪ್ರಾಂತಗಳನ್ನು ನೋಡಿರಿ. ಪಂಜಾಬ್ ಒಂದಿಗಾಳಾಗಳಲ್ಲಿ ಹಿಂದೂಗಳ ಭೂಮಿಯನ್ನು ಕಿತ್ತು ಮುಸಲ್ಮಾನರಿಗೆ ಕೊಡಲಾಗುತ್ತಿದೆ. ಮುರಲ್ಮಾನರು ಯೋಗ್ಯರಿರಲಿ, ಇಲ್ಲದಿರಲಿ, ಶೇಕಡ ಅರವತ್ತರಷ್ಟು ನೌಕರಿ ಮುಸಲ್ಮಾನರಿಗೆ ಸಿಗಬೆಕೆಂದು ಒಂದೂಬಿಲ್ಲನ್ನ ಮುಸ್ಲಿಂ ಮಿನಿಸ್ಟರೊಬ್ಬರು ಅಸೆಂಬ್ಲಿಯ ಮುಂದಿಟ್ಟಿರುವರು. ಬಂಗಾಳದಲ್ಲಿ ಹೆಚ್ಚೆಂದರೆ ಶೇಕಡ 51 ಮುಸಲ್ಮಾನರಿರುವರು. ಇದರಲ್ಲಿ ವಿಶೇಷವೇನೆಂದರೆ ಈ ಬಿಲ್ಲು ಮುಂದೆಬಂದಾಗ ಅಲ್ಲಿರುವ ಕಾಂಗ್ರೆಸ್ ಸದಸ್ಯರು ಸುಮ್ಮನಿರುವದೇ ಲೇಸೆಂದು ತಿಳಿದರು. ಶರಶ್ಚಂದ್ರ ಬೋಸರಂತಹ ಮುಂದಾಳುವಿನ ಅಭಿಪ್ರಾಯವನ್ನು ನೋಡಿರಿ— " ಮುಸಲ್ಮಾನರು ಯೋಗ್ಯರಿಲ್ಲದಿರುವದರಿಂದ ಈ ಅಲ್ಪತೆಯನ್ನು ಪೂರ್ಣಮಾಡಲು ಡಿಪಾರ್ಟ್‌ಮೆಂಟ್ ಪರೀಕ್ಷೆಯಿಡಬೇಕು. ಅದರಲ್ಲಿ ಪಾಸಾದ ಮುಸಲ್ಮಾನರು ಬಿ. ಎ. ಪಾಸಾದಂತೆ ತಿಳಿಯಲ್ಪಡಬೇಕು.

ಇದೇ ಕಾಂಗ್ರೆಸ್ಸಿನ ರಾಷ್ಟ್ರೀಯತೆ ಏನು ? ಇಂದು ಹೈದರಾಬಾದಿನಲ್ಲಿ ನಡೆಯುತ್ತಿರುವದೇನು ? ಹಿಂದೂಗಳು ಪೂಜಾಪಾರಾಯಣ ನಡೆಸಲು ಸಾಧ್ಯವಿಲ್ಲ. ದೇವಾಲಯದ ಕಳಸವು ಮಸೀದಿಗಿಂತ ಎತ್ತರವಿರಲಾಗದು ಸೀವು ಎಲ್ಲಿ ಬೇಕಾದರೂ ನೋಡಿರಿ, ಹಿಂದೂಗಳ ಧರ್ಮ, ಮಾನ, ಆತ್ಮಮರ್ಯಾದೆಗಳ ಸಂಕಟವೊಂದಿದೆ. ಮುಸ್ಲಿಂ ರಾಜ್ಯದಲ್ಲಿಯೂ ಇದೇ ದುಃಖ, ಬ್ರಿಟಿಷ್ ರಾಜ್ಯದಲ್ಲಿಯೂ ಇದೇ ದುಃಖ, ಹಿಂದೂ ಬಹುಮತವಿರುವ ಏಳು ಕಾಂಗ್ರೆಸ್ ಪ್ರಾಂತ್ಯಗಳಲ್ಲಿಯೂ ಇದೇ ದುಃಖ.

ಇತ್ತ ಮಿ || ಜಿನಾರವರ ಕಡೆಗೆ ನೋಡಿರಿ. ಪಂಜಾಬ್, ಬಂಗಾಳ, ಸಿಂದ್‌ನಲ್ಲಿ ಮುಸಲ್ಮಾನರ ಬಹುಮತವಿರುವ ಮೂರು ಪ್ರಾಂತ್ಯದಲ್ಲಿಯೂ ನಿಶ್ಚಲವಾದ ಮುಸ್ಲಿಂ ಮಿನಿಸ್ಟ್ರಿಯು ಸಿದ್ಧವಾಗಿರಲು ಮಿ || ಜಿನ್ನರವರು ಪ್ರಯತ್ನಿಸಿದರು. ಆದರಲ್ಲೀಗ ಬಂಗಾಳಾ, ಪಂಜಾಬಿನಲ್ಲಿ ಲೀಗಿನ ಮಿನಿಸ್ಟ್ರಿಯು ಸ್ಥಿರವಾಯಿತು. ಆಗಲೇ ಪಂಜಾಬಿನ ಪ್ರೀಮಿಯರ್ ಹಯಾತ್ ಖಾನರು ತಮ್ಮ ಪ್ರಾಂತ್ಯದಲ್ಲೆಲ್ಲಾ ಮುಸ್ಲಿಂ ಲೀಗಿನ ಶಾಖೆಗಳನ್ನು ತೆರೆಯಲು ಸ್ಪಷ್ಟವಾಗಿ ಆಜ್ಞೆ ಹೊರಡಿಸಿದರು.

ಹಿಂದೂಗಳೇ ! ಇನ್ನಾದರೂ ಎಚ್ಚೆತ್ತುನಿಲ್ಲಿರಿ. ಮುಂದಿನ ಚುನಾವಣೆಯಲ್ಲಿ ವೋಟ್ ಪಡೆಯುವಾಗ ಮಾತ್ರ ತಾನು ಹಿಂದೂ ಎಂದು ಎಂದು ಹೇಳಿಕೊಳ್ಳಲು ನಾಚುವಂತಹರಿಗೆ ನೀವು ಓಟು ಕೊಡಬೇಡಿರಿ. ಮೇಲ್ಕಂಡೇಳಿದ ರಾಷ್ಟ್ರೀಯತೆಯ ಸೋಗನ್ನು ಬಿಟ್ಟ ಶುದ್ಧ ಹಿಂದುತ್ವದ ಟಿಕೀಟಿನ ಮೇಲೆ ನಿಲ್ಲುವವರಿಗೇ ಓಟು ಕೊಡಿರಿ. ಹಿಂದೂ ನವ ಯುವಕರೇ ! ಮುಂದಿನ ಚುನಾವಣೆಯಲ್ಲಿ ಜಾಗರೂಕರಾಗಿರಿ. ಏಳು ಪ್ರಾಂತ್ಯದಲೂ ಹಿಂದೂ ಮಿನಿಸ್ಟ್ರಿಯು ಸ್ಥಿರವಾಗಿರಲು ಪ್ರಯತ್ನಿಸಿರಿ, ಇಷ್ಟೇ ಅಲ್ಲ. ಪಡೆದ ಹಕ್ಕನ್ನು ದುರುಪಯೋಗಪಡಿಸಿಕೊಳ್ಳದೆ ಹಿಂದೂ ಧರ್ಮ ಸಂಸ್ಕೃ ಭಾಷಾ ವೇಷಗಳ ರಕ್ಷಣೆಯಾಗುವಂತೆ ಪ್ರಯತ್ನಿಸಿರಿ. ನಮ್ಮಲ್ಲಿನ ಹಿಂದುತ್ವವನ್ನರಿತು ನಾವು ಮುಂದುವರಿದಾಗ ನಮ್ಮನ್ನು ಯಾರೂ ಪ್ರತಿಭಟಿಸಲಾರರು. ನಾವು ನಮ್ಮ ಹಿಂದುತ್ವವೆನ್ನು ಮರೆತು ಕುಳಿತರೆ ನಮಗೊಳ್ಳೇದಾಗದು.

ಏಳಿರಿ ಹಿಂದೂತರುಣರೇ ! ಏಳಿರಿ ! ಮುಂದುವರಿಯಿರಿ !

— ಇತಿಶಂ —

ಪ್ರಿಂಟಿಂಗ್ ವಿಚಾರದಲ್ಲಿ
ನಮ್ಮಲ್ಲಿ ಅಧಿಕ ಸೌಲಭ್ಯಗಳಿವೆ.
ಸತ್ಯವಾದಿ ಪ್ರೆಸ್
ಚಾಮರಾಜಪುರಂ, ಮೈಸೂರು

ಜಪಾನು ದೇಶದ ಹುಡುಗಿಯರ ಪಾಠಶಾಲೆಗಳು

ಈ ಪಾಠಶಾಲೆಗಳಲ್ಲಿ ಬಡವರು ಬಲ್ಲಿದರು ಎಂಬ ಬೇಧವಿಡದೆ ಎಲ್ಲಾ ಹೆಣ್ಣುಮಕ್ಕಳೂ ಒಟ್ಟಾಗಿ ಸೇರಿ ಅತ್ಯಂತ ಪ್ರೇಮಪೂರ್ವಕವಾದ ಅಭ್ಯಾಸ ಮಾಡುತ್ತಾರೆ. ಇಲ್ಲಿ ಹುಡುಗಿಯರು ವಿದ್ಯಾಭ್ಯಾಸ ಮಾಡಿದಮೇಲೆ ವಿವಾಹಕ್ಕೆ ಯೋಗ್ಯರಾಗುವರು. ಈ ಜಪಾನು ಸ್ತ್ರೀಯರು ಒಳ್ಳೇ ಆಚಾರಶೀಲರು. ಧರ್ಮಗ್ರಂಥಗಳಲ್ಲಿಯೂ ಪುರಾಣಗಳಲ್ಲಿಯೂ ತುಂಬಾ ನಂಬಿಕೆಯುಳ್ಳವರು. ಈ ಪಾಠಶಾಲೆಗಳಲ್ಲಿ ಅಡಿಗೆ ಮನೆ, ಊಟದಮನೆ, ಸಂಗೀತದ ಮನೆ, ಹೊಲಿಗೆ ಮನೆ ಉಪನ್ಯಾಸದ ಮನೆ, ವಾಸದಮನೆ, ಮಲಗುವ ಮನೆ, ಕೂಡುವ ಮನೆ, ಈ ಪ್ರಕಾರ ಪ್ರತಿಯೊಂದೊಂದು ತರಹದ ಕೊಠಡಿಗಳನ್ನು ಏರ್ಪಾಟು ಮಾಡಿರುವರು. ಅಲ್ಲಿ ಕೇವಲ 6 ತಿಂಗಳು ಮಾತ್ರ ಆದರೆ ಸಣ್ಣ ಹುಡುಗಿಯರು ಇಷ್ಟ ಪಡುವದಾದರೆ ಮತ್ತೂ ವಿದ್ಯಾಭ್ಯಾಸ ಮಾಡಬಹುದು ಅಭ್ಯಾಸ ಮಾಡುವ ಅನೇಕ ಹೆಣ್ಣುಮಕ್ಕಳು ಈ ಪಾಠಶಾಲೆಗಳಲ್ಲಿಯೇ ಕಾಲ ಕಳೆಯಲು ಇಷ್ಟಪಡುತ್ತಾರೆ. ಈಗ ಅಲ್ಲಿಯ ಅಧ್ಯಕ್ಷವರ್ತಿಯವರು ಪ್ರತಿಯೊಂದು ಮನೆಯ ಹೆಣ್ಣು ಹುಡುಗಿಯರು ವಿದ್ಯಾಭ್ಯಾಸವನ್ನು ಮಾಡಿಯೇ ತೀರಬೇಕೆಂದು ಕಾನೂನು ಮಾಡಿರುತ್ತಾರೆ. ಈ ಪಾಠಶಾಲೆಗಳಲ್ಲಿ ತರುಣಿಯರು ಅತಿಥಿಗಳನ್ನೇ ಆದರಿಸುವರು. ಹೆಣ್ಣುಮಕ್ಕಳು ಮನೆಯಲ್ಲಿ ಹೇಗೆ ನಡೆಯಬೇಕೆಂಬುದನ್ನು ಕಲಿಸಿಕೊಡುವರು. ತಮ್ಮತಮ್ಮ ಮನೆಗಳಲ್ಲಿ ಶೃಂಗಾರ ಮಾಡುವದಕ್ಕೆ ಯೋಗ್ಯವಾದ ಚಿತ್ರಮಯವಾಗಿ ಹೂವುಗಳನ್ನು ಕತ್ತರಿಸುವದನ್ನು ಕಸೂತಿಹಾಕುವದನ್ನು ಹೇಳಿಕೊಡುತ್ತಾರೆ. ಇದು ಅಲ್ಲದೆ ಕೈಬರಹದಿಂದ ಕಾಗದಗಳನ್ನು ಒರೆಯುವದು, ಸಂಗೀತವಿದ್ಯೆ ಮುಂತಾದ ಯಾವತ್ತೂ ವಿದ್ಯೆಗಳನ್ನು ತಪ್ಪದೆ ಹೇಳಿಕೊಡುತ್ತಾರೆ ತಮ್ಮ ದೇಶದ ಪಾಡಿಗಳಲ್ಲದೆ ಇತರ ದೇಶದ ಅಡಿಗೆಗಳನ್ನು ಮಾಡುವ ವಿಧಾನಗಳನ್ನು ಹೇಳಿಕೊಡುವರು.

ಈ ಪಾಠಶಾಲೆಯ ಅಭ್ಯಾಸದ ಹುಡುಗಿಯರಿಗೆ ಮಧ್ಯಾಹ್ನದ ಫಲಾಹಾರವು ಈ ಪಾಠಶಾಲೆಯಲ್ಲಿಯೇ ನಡೆಯುತ್ತದೆ. ಫಲಾಹಾರವನ್ನು ತಿಂದ ಬಳಿಕ ಸರದಿಯ ಮೇಲೆ ಬಟ್ಟಲುಗಳನ್ನೆಲ್ಲಾ ಶುಭ್ರವಾಗಿ ತೊಳೆದಿಡುತ್ತಾರೆ. ಫಲಾಹಾರವಾದ ನಂತರ ನಿತ್ಯವೂ ಆಚಾರ ಧರ್ಮ ಬೋಧೆಯ ಉಪನ್ಯಾಸವು ನಡೆಯುತ್ತದೆ. ಇದೇ ಪ್ರಕಾರ ಪ್ರತಿವಾರವೂ ನೂರಾರು ಅಡಿಗೆಯವರು ಸೇರುತ್ತಲೂ ಸಾರಂಗತರಾಗುತ್ತಲೂ ಇದ್ದಾರೆ. ಈ ಪ್ರಕಾರ ಸುಶಿಕ್ಷಣವನ್ನು ಪಡೆದು ತರುಣಿಯರು ಒಳ್ಳೆಯ ಮಾತೆಯರಾಗಿ ದೇಶಕ್ಕೆ ಕೀರ್ತಿ ತರುವದರಲ್ಲಿ ಸಂದೇಹವಿಲ್ಲ.

ನಮ್ಮ ಹಿಂದೂದೇಶದ ವಿದ್ಯಾಭ್ಯಾಸದ ತರುಣಿಯರು ಈ ಜಪಾನ್ ದೇಶದ ಸ್ತ್ರೀಯರಂತೆ ಆಚಂಸಬೇಕೆಂದು ನಮ್ಮ ಅಭಿಪ್ರಾಯ.

(ನವಸಂದೇಶ)

ಇಂಡಿಯಾದೇಶಕ್ಕೆ ದ್ರೋಹವನ್ನು ನಾವು ಮಾಡಕೂಡದು

(1 ನೇ ಪುಟದಿಂದ)

ಲ್ಲದೆ ಸ್ಪಷ್ಟದಲ್ಲಿಯೂ ಯಾರೂ ಅರಿತಿದ್ದಿಲ್ಲ.

ಲಂದನ್ನಿನ ಪ್ರಜೆಗಳು ಆಹೋರಾತ್ರಿಗಳಲ್ಲಿ ಅನುಭವಿಸುತ್ತಿರುವ ಬಾಧೆಗಳ ವಿಷಯಗಳನ್ನು ಓದಿರಿ. ಶತ್ರುಗಳನ್ನು ಧೈರ್ಯದಿಂದ ಎದುರುಗೊಳ್ಳುತ್ತಿರುವ ಬ್ರಿಟಿಷರ ನಿರುಪಮಾನವಾದ ಧೈರ್ಯಸಾಹಸ ವಿಷಯಗಳನ್ನು ಕುರಿತು ಓದಿರಿ.

ಬ್ರಿಟೀಷು ವೈಮಾನಿಕರು ಗಾಳಿಯಲ್ಲಿಯು ಉಪದ್ರವಗಳನ್ನು ಎದುರಿಸಲು ತೋರಿಸುತ್ತಿರುವ ಧೈರ್ಯಸಾಹಸಗಳನ್ನು ಕುರಿತು ಓದಿರಿ.

ಇದೆಲ್ಲಾ ಬ್ರಿಟನ್ನಿನ ಸ್ವಾತಂತ್ರ್ಯಕ್ಕಾಗಿ ಆದರೆ ಇಂಡಿಯಾ ಸ್ವಾತಂತ್ರ್ಯಕ್ಕಾಗಿಯೂ ಕೂಡ. ಮತ್ತು ಇದೆಲಾ ಪ್ರಪಂಚದ ಸ್ವಾತಂತ್ರ್ಯಕ್ಕಾಗಿಯೂ ಕೂಡ.

ಈಗ ಶಾಸನೋಲ್ಲಂಘನವನ್ನು ಆರಂಭಿಸಿದಲ್ಲಿ ಇಂಡಿಯಾಕ್ಕೆ ದ್ರೋಹಮಾಡಿದಂತೆ. ಆ ದ್ರೋಹಫಲವನ್ನು ಶತಾಬ್ದಗಳವರೆಗೂ ಅನುಭವಿಸಬೇಕಾಗಿ ಒರುವದು.

ಗಾಂಧಿಯವರು ಶಾಸನೋಲ್ಲಂಘನವನ್ನು ಪ್ರಾರಂಭಿಸಿದಲ್ಲಿ ಇಂಡಿಯಾವಿಗೆ ಮೋಸವಾಗುವದು. ಇಂಡಿಯಾದಲಿ ಶಾಸನೋಲಂಘನವನ್ನು ಪ್ರಾರಂಭಿಸಿದಲ್ಲಿ ಇಂಡಿಯಾವಿಗೆ ಮೋಸವಾಗುವವೆಂಬ ದೃಷ್ಟಿಯು ಪ್ರತಿಯೊಬ್ಬನಿಗೂ ಇರತಕ್ಕದ್ದು.

ಪ್ರಜೆಗಳು ದೇಶದ್ರೋಹಿಯೆಂದು ಕರೆಯುತ್ತಿದ್ದರೂ ಲಕ್ಷ್ಯವಿಡದವರು, ಈ ಅಸತ್ಯ ದೇಶಭಕ್ತಿಯನ್ನು ಕುರಿತು ಮಾತನಾಡತಕ್ಕದ್ದು ಬರೆಯತಕ್ಕದ್ದು.

ನಿಜವಾದ ದೇಶಭಕ್ತಿಯು ಯಾವುದೆಂದರೆ ಪ್ರಪಂಚವನ್ನು ಇಂಡಿಯಾದ ಮುಖ್ಯ ವಿಷಯವಾಗಿ ಮಾಡುವಿಕೆ.

ಅಸತ್ಯವಾದ ದೇಶಭಕ್ತಿ ಯಾವುದೆಂದರೆ ಇಂಡಿಯಾವನ್ನು ಯುದ್ಧದಿಂದ ಬೇರೆ ಮಾಡುವದು ಶಾಸನೋಲ್ಲಂಘನವನ್ನು ಪ್ರಾರಂಭಿಸುವದು ಇದರಿಂದ ಅಶಾಂತಿಯು ಹೆಚ್ಚುವದು ಯುದ್ಧದಲಿ ಸೋತು ಹೋಗಬಹುದು. ಆದರಿಂದ ಇಂಡಿಯಾವಿಗೆ ನಷ್ಟವುಂಟಾಗಬಹುದು.

(ಅನುವಾದ)

ಆನಂದವಿಹಾರ 13 ಬಹುಮಾನ ರೂ. 20

ಪ್ರವೇಶಧನ ಪ್ರತಿ ಉತ್ತರಕ್ಕೂ ೧ ಆಣೆ. ಎಷ್ಟು ಉತ್ತರ ಬೇಕಾದರೂ ಕಳುಹಿಸಬಹುದು. ಉತ್ತರ ತಲಪಿಸಲು ಕಡೇ ತಾ. ೧೦-೧೧-೪೦.

ಮೊದಲನೇ ಬಹುಮಾನ ರೂ ೧೦ ಇತರ ಬಹುಮಾನ ರೂ. ೧೦

ಸರಿಯಾದ ಉತ್ತರವು ತಾ|| 13–11–40 ನೇ ಸತ್ಯವಾದಿಯಲ್ಲಿ ಪ್ರಕಟಿಸಲ್ಪಡುವದು:

ನಿಯಮಗಳು— ಮೊಹರು ಮಾಡಿ ಇಟ್ಟಿರುವ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ ಮೊದಲನೆ ಬಹುಮಾನವೂ, 1-2 ನೇ ತಪ್ಪಿನದಕ್ಕೆ ಇತರ ಬಹುಮಾನ ಕೊಡಲಾಗುತ್ತೆ. ಸರಿಯಾದ ಉತ್ತರಗಳು ಹೆಚ್ಚಾಗಿ ಬಂದಲ್ಲಿ ಅವಕ್ಕೆ ಹಂಚಲಾಗುವುದು. ಪ್ರವೇಶಧನವನ್ನು ಮನಿಯಾರ್ಡರ್ ಅಥವಾ ಸ್ಟ್ಯಾಂಪು ಕಳ ಹಿಸಬಹುದು. ಮ್ಯಾನೇಜರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು. ಉತ್ತರಗಳನ್ನು ಬಿಳಿಯ ಕಾಗದದ ಮೇಲೆ ಚಿತ್ತಿಲ್ಲದಂತೆ ಬರೆದು ಕಳುಹಿಸಬಹುದು. ಮ್ಯಾ.

ಕೆಳಗೆ ಕೊಟ್ಟಿರುವ 5 ಪದಗಳಲ್ಲಿ ಬಿಟ್ಟಿರುವ ಅಕ್ಷರವನ್ನು ಸೂಚನೆಯನ್ನನುಸರಿಸಿ ಸೇರಿಸಬೇಕು.

1 — ಪತಿ ಈತನು ಎಲ್ಲರ ಹಿತಕಾಂಕ್ಷಿ.

2 — ಮ ಮನುಷ್ಯರಲ್ಲಿ ಇದು ವಿಪರೀತವಾದಲ್ಲಿ ಕೆಡಕು.

3 — ಚಿ ತಿನ್ನುವ ಆಹಾರ ಹೀಗಿರಬೇಕು.

4 ವನ್ಯ — — ಇದರಿಂದ ಅಲ್ಪಮತಿಗಳು ಹೆಚ್ಚು ಪ್ರಯೋಜನ ಹೊಂದಲಾರರು.

5 — ಕ್ತರು ಇವರಿಗೆ ಎಷ್ಟು ತಾಳ್ಮೆಯಿದ್ದರೆ ಅಷ್ಟು ಒಳ್ಳೆಯದು.

ಕೂಪನ್ ನಂ.	ಹೆಸರು ಮತ್ತು ವಿಳಾಸ

ವಿ. ಸೂ—ಮೈಸೂರಿನಲ್ಲಿ ಈ ಸ್ಪರ್ಧೆಯಲ್ಲಿ ಭಾಗವಹಿಸುವವರು ನಮಗಾಗಲೀ ಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ರೇಡಿಯಂಟ್ ಸ್ಟೂಸ್ ಏಜೆನ್ಸಿಗಾಗಲೀ ಪ್ರಾಪ್ತಿಮಾಡಬಹುದು.

ಮ್ಯಾನೇಜರ್, **ಆನಂದವಿಹಾರ** C/o ಸತ್ಯವಾದಿ ಆಫೀಸ್, ಚಾಮರಾಜಪುರಂ, ಮೈಸೂರು.

ಮನೆಗಳು

ಮೈಸೂರಿನ ಸಿಟಿಯಲ್ಲಿ ಎಲ್ಲಾ ಮೊಹಲ್ಲಾಗಳಲ್ಲಿಯೂ ಮನೆಗಳು ಕ್ರಯ, ಭೋಗ್ಯ, ಅಧಾರಗಳಿಗೆ ಬೇಕಾದಲ್ಲಿ ಆಥವಾ ಮಾರಬೇಕಾದಲ್ಲಿ ನಮ್ಮನ್ನು ವಿಚಾರಿಸಿದರೆ ಉಭಯ ಪಾರ್ಟಿಗಳಿಗೂ ಅನುಕೂಲವಾದ ಏರ್ಪಾಟು ಮಾಡಿಕೊಡುತ್ತೇವೆ. ಜವಾನುಗಳಿಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳನ್ನೂ ಮಾಡುತ್ತೇವೆ.

ಗೆಜಿಟೆಡ್ ಸರ್ಕಾರಿ ನೌಕರರುಗಳಿಗೆ ಸ್ವಂತ ಜವಾಬ್ದಾರಿ ಸಾಲ ಕೊಡಿಸಲಾಗುತ್ತೆ ವಿಷಯುಗಳಿಗೆ ಖುದ್ದಾಗಿಯೂ, ಪತ್ರಮುಖೇನ ಸಹ ತಿಳಿಯಬಹುದು.

ಆರ್. ಗುಂಡೂರಾವ್, ಪ್ರೊಪ್ರೈಟರ್,
ಮೈಸೂರು ಬಿಸಿನೆಸ್ ಬ್ಯೂರೋ
ಹೌಸ್, ಎಸ್ಟೇಟ್, ಲೋನ್ ಏಜೆಂಟ್ಸ್
ಹಳೆ ಮೈಸೂರು ಬ್ಯಾಂಕ್ ಕಟ್ಟಡ ಮೈಸೂರು
ಮಾರ್ಕೆಟ್ ಪೋಸ್ಟ್ (ಆಫೀಸ್ ಪಶ್ಚಿಮಕ್ಕೆ)
ಅ ಥ ವಾ
8 ಸೀತಾವಿಲಾಸ ಅಗ್ರಹಾರ (ಮರಿಮಲ್ಲಪ್ಪ ಹೈಸ್ಕೂಲು ಎದುರಿಗೆ) ಮೈಸೂರು

When you desire to buy or sell
Govt. Loan Bonds
Shares of Companies
apply to
The Satyavadi Ltd., Mysore.

ಸತ್ಯವಾದಿ ವಾರಪತ್ರಿಕೆಗೆ ಚಂದಾದಾರರಾಗಿರಿ.

ಕಾದಂಬರಿ ಸಂಗ್ರಹ ಪೂಸಪತ್ರಿಕೆಯ ಸಂಬಂಧವಾದ

ತೃತೀಯ ಸಾಹಿತ್ಯ ಸಪ್ತಾಹ ಮಹೋತ್ಸವವು ಇವತ್ತಿನಿಂದ 12 ನೇ ತಾರೀಖಿನವರಿಗೆ ನಡೆಸಲ್ಪಡುವದೆಂದು ಎಡಿಟರ್ ಶ್ರೀ ವೆಂಕಟರಮಣ ಶಾಸ್ತ್ರಿಗಳು ತಿಳಿಸಿರುತ್ತಾರೆ. ಈ ಕಾಲದಲ್ಲಿ ನಿತ್ಯವೂ ಸಾಯಂಕಾಲ 6 ಗಂಟೆಯಿಂದ 7–30 ರವರೆಗೆ ವಿದ್ವಾಂಸರಿಂದ ಉಪನ್ಯಾಸಗಳು ನಡೆಯುವದು. ಕಡೆಯದಿವಸ ಶ್ರೀ ಬಿಡಾರ ಕೃಷ್ಣಪ್ಪನವರ ಶಿಷ್ಯಮಂಡಲಿಯ ಸಂಗೀತ ನಡೆಯುವುದು. ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇವೆ.

ಸುಲಭ ಚಿಕಿತ್ಸೆ

1. ಚೇಳು ಕಚ್ಚಿದ್ದಕ್ಕೆ—ಬೀಳೇ ಎಕ್ಕದ ಬೇರನ್ನು ಗ್ರಹಣ ಸಮಯದಲ್ಲಿ ತಂದಿಟ್ಟುಕೊಂಡಿದ್ದು ನೀರಿನಲ್ಲಿ ಗಂಧವನ್ನು ತೆಗೆದು ಕಚ್ಚಿದ ಸ್ಥಳಕ್ಕೆ ಉಜ್ಜಿ ಬೆಂಕಿಯ ಶಾಖವನ್ನು ಕೊಡುವದು.

2. ಸೂತಿಕಾವಾಯು ಅಥವಾ ಕ್ಷಯಕ್ಕೆ—(ಅ) ಕೆಂಪು ಶೀಗೆ ಬೇರು ತಂದು ಜೀರಿಗೆ, ಮೆಣಸು, ತುಂಬಿಗಳೊಂದಿಗೆ ಕಷಾಯ ಮಾಡಿ ಕುಡಿಸುವದು (ಆ) ಹಿಪ್ಪಲಿ, ಮೆಣಸು ಬೆಂಕಿಯ ಮೇಲೆ ಹಾಕಿ ಬೆಚ್ಚಗೆ ಮಾಡಿ ಕಟ್ಟಿ ಹೊಮ್ಮಗಳೀ ರಸದೊಂದಿಗೆ ಕೊಡುವದು. ಸೀಸಾರು ಅನ್ನ ಅಥವಾ ಹಾಲು ಅನ್ನ ಪಥ್ಯ.

3. ಕಾದಗಂಜಿ ಬಿದ್ದು ಬೊಬ್ಬೆಯಾದರೆ—ಎಣ್ಣೆಯನ್ನು ಸವರಿ ಮೇಲೆ ಹುಣಿಸೇ ಚಕ್ಕೆಯ ಪುಡಿಯನ್ನು ಹಾಕುವದು.

4. ಮಧುಮೇಹಕ್ಕೆ—ಬೆಲ್ಲವನ್ನೂ ಸಕ್ಕರೆಯನ್ನೂ ಉಪಯೋಗಿಸದೆ ಇರಬಾರದು. ಬೆಲ್ಲವನ್ನು ಉಪಯೋಗಿಸುವವರು 5 ಸೊಲೆ ಬೆಲ್ಲಕ್ಕೆ 5 ಆಣೆ ತೂಕ ಮೆಣಸನ್ನು ಸೇರಿಸಿ ಉಪಯೋಗಿಸಬೇಕು. ಸಕ್ಕರೆಯನ್ನುಪಯೋಗಿಸುವವರು 5 ತೊಲ ಸಕ್ಕರೆಗೆ ಎರಡು ಆಣೆಯ ತೂಕ ಯಾಲಕ್ಕಿಯನ್ನು ಬೆರಸಿ ಸೇವಿಸುವದು. ಇದರಿಂದಲೇ ಮಧುಮೇಹ ನಿವಾರಣೆಯಾಗುವದು.

5. ಟ್ಯೂಬರ್‌ಕ್ಲುಸೋಸಿಸ್ ಎಂಬ ಕ್ಷಯವ್ಯಾಧಿಗೆ—ಗುಡೂಚಿಬಳ್ಳಿಯ ಎಳೆಯ ಎಲೆಗಳನ್ನು ಕುಟ್ಟಿ ಹಿಂಡಿದ ರಸ 60 ತೊಟ್ಟಿನೊಂದಿಗೆ ಆಕಳ ತುಪ್ಪವನ್ನು ಮಿಶ್ರಮಾಡಿ ದಿನಂಪ್ರತಿ ಸೇವಿಸುತ್ತಾ ಬರೀ ಮೈಯಲ್ಲಿ ಸೂರ್ಯರಶ್ಮಿಯು ದೇಹಕ್ಕೆ ಬೀಳುವಂತೆ ಸುಮಾರು ಒಂದು ಘಂಟೆಯ ಕಾಲ ಸೂರ್ಯರಶ್ಮಿಗಳ ಸ್ನಾನಮಾಡುವದು. ಹೀಗೆ 40 ದಿನ ಮಾಡುವದು.

ವಿ. ಸೂ.—ಕ್ಷಯವ್ಯಾಧಿಯವರಿಗೆ ಮೇಲ್ಕಂಡ ಔಷಧಿಯನ್ನುಪಯೋಗಿಸುವಾಗ ಹೆಚ್ಚಾಗಿ ತುಪ್ಪ ಹಾಕಬೇಕು, ಹೊನಗನೆ ವಂದೆಲಗದ ಸೊಪ್ಪುಗಳನ್ನುಪಯೋಗಿಸಬೇಕು. ಮೃಷ್ಟಾನ್ನ ಭೋಜನ ಮಾಡಬೇಕು.

ಬೆನ್ನುಹಣಿಗೆ—ಸಕ್ಕರೆಯನ್ನು ಅ ಸ್ಥಳಕ್ಕೆ ತುಂಬುತ್ತಾ ಬಂದಲ್ಲಿ ಗುಣವಾಗುವದು.

ಓ ಂ.

ಕಾರ್ಪುರದ ಮ್ಯಾಜಿಸ್ಟ್ರೇಟರ ಬಂಗಲೆಯಲ್ಲಿಯ ಒಂದು ಮೂಲೆಯಲ್ಲಿಯೇ ಕಳ್ಳತನದಿಂದ ಇವರ ನೌಕರನು ಸಾರಾಯಿಯನ್ನು ತಯಾರಿಸುತ್ತಿದ್ದನು. ಹಾಗೆ ಮಾಡುತ್ತಿದ್ದುದನ್ನು ಮ್ಯಾಜಿಸ್ಟ್ರೇಟರು ಕಂಡು ಅವನನ್ನು ಅರೆಸ್ಟು ಮಾಡಿಸಿರುವರು.

ವಿನೋದಲಹರಿ

ಟ್ರಾಫಿಕ್ ಮ್ಯಾನೇಜರ್—ಅಲ್ವಯ್ಯ ಇವಳ್ನ ಯಾಕಯ್ಯ ಬಿಡ್ಲಿಲ್ಲ ಒಳ್ಗೆ, ನನ್ ಹೆಂಡ್ತಿ ಅಂತ್ಲೂ ತೋರ್ಲಿಲ್ವೆ ನಿನ್ ಮನಸ್ಸಿಗೆ.

ಟಿಕೆಟ್ ಕಲೆಕ್ಟರ್ ಸಾಬಿ—ಅರೆ ಆಗ್ಲೆ ನಿಂ ಹೆಂಡ್ತೀರು ಅಂತ ಐದು ಜನ ಬಂದಿದ್ರಲ್ಲ ಸಾಮಿ. ಇವ್ರು ಆರ್ನೇಯವ್ರು ಅಂಗಾದ್ರೆ ನಿಮ್ಗೆಷ್ಟು ಜನ ಹೆಂಡ್ತೀ.....

ಂ ಂ

ಸಬ್ ಇನ್ಸ್‌ಪೇಕ್ಟರ್—ಏ ಗಾಡೀವಾಲಾ ?

ಗಾಡಿವಾಲ—ಅರೆ ನಾನು ಎಡ್ಗಡೇನೆ ಹೊಡಿತ್ತಿದ್ದೀನಲ್ಲಾ ಸಾಮಿ.

ಸಬ್ ಇನ್ಸ್‌ಪೆಕ್ಟರ್—ಅದು ಸರಿ ನಾನು ಮಾರ್ಕೆಟ್ಗೆ ಹೋಗ್ಬೇಕು.

ಂ ಂ

ಪೋಲಿಸ್‌ನವ—ಏ, ಏನೋ ಮಾಡ್ತಿದ್ದೀ ಒಳ್ಗೇ. ಇಷ್ಟೊತ್ತಿನಲ್ಲಿ ಹಾಂ ಬಾ ಆಚೆ.

ಕಳ್ಳ—ಅರೆ ನನ್‌ದೊಂದು ಬೆಂಕಿಪೆಟ್ಗೆ ಬಿದ್ದೊಗ್ಬೆತೆ ಹುಡುಕ್‌ತಿದ್ದೀನಿ ತಡೀರಿ ಸಾಮಿ.

ಂ ಂ

ಮೊದಲನೆಯ ಕಿವುಡ—ಅಲ್ಲ ಸಿನೀಮಾಕ್ಕೆ ಹೊರಟ್ರೇ ಅಂತೀನಿ.

ಎರಡನೇ ಕಿವುಡ—ಇಲ್ಲ ಸ್ವಾಮಿ, ಇಲ್ಲೇ ಸಿನಿಮಾಕ್ಕೆ ಹೊರ್ಟೆ.

ಮೊದಲನೆಯ ಕಿವುಡ—ಓ, ಹಾಗೇನು ನಾ ಎಲ್ಲೋ ಸಿನಿಮಾಕ್ಕೆ ಹೊರಟ್ರೇನೋ ಅಂತ ಮಾಡಿದ್ದೆ.

ಂ ಂ

ಆತ—ನಾ ಹೇಳಿದ್ನೆ, ಆನತ್ತು ಕೊಟ್ಟ ಎರಡಾಣೆ ಎಲ್ಲಯ್ಯ.

ಈತ—ಅಯ್ಯೋ ಮಹಾರಾಯ ನಾನವತ್ತೇ ಸಿನಿಮಾಕ್ಕೆ ಹೋಗಿದ್ನಲ್ಲಾ.

ಂ ಂ

ತಂದೆ—ಅಯ್ಯೋ ಪಾಪ ಮೋಟಾರ್ಗೆ ಸಿಕ್ಕೊಂಡು ಸತ್ತೋಯ್ತಲ್ಲಾ.

ಸಣ್ಣಮಗು—ಅಲ್ಲಿ ಸೈಕಲ್ ಮೇಲೆ ಹೋಗ್ತಾ ಇದ್ದಾನಲ್ಲ. ಅವ್ನ ಸತ್ತೋಗಿರೋದು.

ಎಂ. ಕೆ. ಅನಂತರಾಜು,
ಕಿಲ್ಲೇಮೋಹಲ್ಲಾ, ಮೈಸೂರು.

ಲೇಖಕರಿಗೆ ಸೂಚನೆ

ಚೆನ್ನಾಗಿರುವ ಕಥೆ, ನಾಟಕ, ತಾತ್ಕಾಲಿಕ ಮತ್ತು ದೇಶಹಿತದಾಯಕವಾದ ಲೇಖನಗಳು, ವಿನೋದ ವಿಚಾರ, ಮುಂತಾದವುಗಳನ್ನು ಕಳುಹಿಸಿದರೆ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ.

ಚಿತ್ರ - ವಿಚಿತ್ರ

ಗುಂಟೂರು ಡಿಸ್ಟ್ರಿಕ್ಟು ನರಸರಾವುಪೇಟೆಯ ವಾಸಸ್ಥನಾದ ಷೇಕ್ ಆದಂ ಸಾಬರವರ ಷೇಕ್ ಮಸ್ತಾನ್ ಎಂಬಾತನಿಗೆ ಸಂಸ್ಕೃತ ವ್ಯಾಸಂಗದಲ್ಲಿ ಹೆಚ್ಚು ಅಭಿರುಚಿ. ಈತನು ವಿದ್ಯಾರ್ಥಿಯೂನಿವರ್ಸಿಟಿಯ 'ಬಿ' ವಿದ್ವಾನ್ ಪರೀಕ್ಷೆಗೆ ಪಠನೆ ಮಾಡುತ್ತಿರುವನು. ವ್ಯಾಸಂಗವನ್ನು ಎಲ್ಲಿ ಮಾಡುತ್ತಿದ್ದರೂ ಮಧೂಕರ ವೃತ್ತಿಯಿಂದ ಜೀವಿಸುತ್ತಿರುವನು. ಹಿಂದೂ ವಿದ್ಯಾರ್ಥಿಗಳೇ ಸಂಸ್ಕೃತ ವಿದ್ಯಾಭ್ಯಾಸ ವಿಷಯದಲ್ಲಿ ಉಪೇಕ್ಷೆಯಿಂದಿರುವ ಈ ಕಾಲದಲ್ಲಿ ಮಹಮದೀಯ ವಿದ್ಯಾರ್ಥಿಯು ಮಧೂಕರ ವೃತ್ತಿಯಿಂದ ಸಂಸ್ಕೃತ ವಿದ್ಯಾಭ್ಯಾಸ ಮಾಡುತ್ತಿರುವನು ಆಶ್ಚರ್ಯವೇ ಸರಿ.

ಂ ಂ

ಧೋಲ್ಪುರ ಸಂಸ್ಥಾನಕ್ಕೆ ಸೇರಿದ ಬಾರೋಲಿ ಎಂಬ ಗ್ರಾಮಕ್ಕೆ ಒಬ್ಬ ಭಿಕ್ಷುಕನು ಆನೆಯ ಮೇಲೆ ಕುಳಿತು ಭಿಕ್ಷಾಟನೆಗಾಗಿ ಬೀದಿಬೀದಿಗೂ ಬಂದದ್ದು ಅಲ್ಲಿಯವರಿಗೆ ಆಶ್ಚರ್ಯವನ್ನುಂಟುಮಾಡಿತು.. ಆ ಭಿಕ್ಷುಕ ಚಕ್ರವರ್ತಿಯು ಅಯೋಧ್ಯೆಯಿಂದ ಹೊರಟು ಅಖಿಲ ಭಾರತ ಪರ್ಯಟಣ ಮಾಡಲು ನಿಶ್ಚಯಿಸಿರುವನು. ಭಿಕ್ಷಾಟನೆಯಿಂದಲೇ ಆತನು ದಿನಕ್ಕೆ 5 ರೂಪಾಯಿಗಳನ್ನು ಸಂಪಾದಿಸುತ್ತಿರುವನು.

ಂ ಂ

ಆಸ್ಟ್ರೇಲಿಯಾ ಖಂಡದ ಪೋರ್ಟ್ ಅಗಸ್ಟಾದಲ್ಲಿ ಒಂದು ವಿಚಿತ್ರವಾದ ಪಟ್ಟಣವಿದೆ. ಅಲ್ಲಿಯವರು ವಾಸಮಾಡುವದು ಮನೆಗಳಲ್ಲ. 6 ಆಡಿ ವ್ಯಾಸವುಳ್ಳ ಕಬ್ಬಿಣದ ಕೊಳಾಯಿಗಳಲ್ಲಿ ಆ ಕೊಳಾಯಿಗಳಲ್ಲಿಯೇ ಕೋಣೆಗಳನ್ನು ಮಾಡಿಕೊಂಡು ಸುಖ ಜೀವನವನ್ನು ಮಾಡಿಕೊಂಡಿರುವರು.

ಂ ಂ

ಓಹಿಯೋವಿನಿಂದ ಒಬ್ಬರು ಟೆಕ್ಸಾಸಿಗೆ ತಮ್ಮ ನಾಯಿಯನ್ನು ತೆಗೆದುಕೊಂಡು ಹೋದರು. ಆದರೆ ಅದು ಅಲ್ಲಿರಲು ಇಷ್ಟಪಡದೆ ಅದೃಶ್ಯವಾಯಿತು. 6 ತಿಂಗಳಲ್ಲಿ 1100 ಮೈಲಿಗಳನ್ನು ನಡೆದು ಪುನಃ ಓಹಿಯೋನಲ್ಲಿ ಕಾಣಬಂದಿತು. ಈ ನಾಯಿಯು ಸುಖವಾಗಿ ತಾನು ಹಿಂದೆಇದ್ದ ಮನೆಗೆ ಸೇರಿದ್ದಕ್ಕೆ ಎಲ್ಲರೂ ಆಶ್ಚರ್ಯಗೊಂಡರು.

ಂ ಂ

ಸೂಡಾನಾ ಸೈನಿಕನೊಬ್ಬನು ಇಟಲೀ ಸೈನಿಕರ ಉಡುಪನ್ನು ಧರಿಸಿ ಹೊರಗೆ ಬಂದು ಅನೇಕ ಇಟಲೀ ಸೈನಿಕರನ್ನು ರಸ್ತೆಯಲ್ಲಿ ಗುಂಡುಹೊಡೆದು ಸಾಯಿಸಿ ಸೂಡಾನ್‌ನೊಳಗೆ ಇಟಲೀ ಸೈನ್ಯವು ಬಾರೆದಂತೆ ಮಾಡಿದನು. ಇದನ ಸಾಹಸವು ಪ್ರಶಂಸನೀಯವು.

Founded 1917

SATYAVADI

ನಿಮ್ಮ ಚರ್ಮವೇ
ನಿಮ್ಮ ಆರೋಗ್ಯಭಾಗ್ಯವು

ನಾವು ನಮ್ಮ ಕಣ್ಣುಗಳನ್ನಾಗಲೀ ಹಲ್ಲುಗಳನ್ನಾಗಿಲೀ ಡಾಕ್ಟರಿಂದ ಪರೀಕ್ಷೆ ಮಾಡಿಸಬೇಕಾದ ಪ್ರಮೇಯವು ಒದಗಿದಾಗ "ಈತನು ಚಿಕಿತ್ಸಾಶಾಸ್ತ್ರ ಪ್ರವೀಣನೋ?" ಎಂಬ ವಿಷಯವನ್ನು ಪ್ರಥಮತಃ ಯೋಚಿಸುವೆವು. ಆ ಡಾಕ್ಟರನ ಮೋಟಿ ತರವಸೆ ಇಡಬಹುದೇ ಎಂಬುವುದನ್ನು ಕೂಡ ತರಿಯು ಜಾಗರೂಕರಾಗದುತ್ತೇವೆ.

ನಿಜವಾಗಿ, ಸರಿಯಾದ ಶಾಸ್ತ್ರಜ್ಞಾನವಿಲ್ಲದ ಅಥವಾ ಅನುಭವವಿಲ್ಲದ ಡಾಕ್ಟರುಗಳ ವಶಕ್ಕೆ ನಮ್ಮ ಕಣ್ಣುಗಳನ್ನಾಗಲೀ ಹಲ್ಲುಗಳನ್ನಾಗಲೀ ಚಿಕಿತ್ಸೆಗಾಗಿ ಒಪ್ಪಿಸತಕ್ಕುದಲ್ಲ.

ಇನ್ನು ನಿಮ್ಮ ಚರ್ಮದ ವಿಷಯವೋ?

ನೀವು ದೇಹನೈರ್ಮಲ್ಯಕ್ಕಾಗಿ ಉಪಯೋಗಿಸುವ ಸಾಬೂನಿನ ವಿಷಯವೇನು? ಅದು ಬಿರಿಕೆಯಿಲ್ಲದ ಕಚ್ಚಾ ಪದಾರ್ಥಗಳಿಂದ ಆರೋಗ್ಯ ವಿಧಾನದಿಂದ ತಯಾರಿಸಲ್ಪಟ್ಟಿದೆಯೇ? ಎಂಬ ವಿಷಯವನ್ನು ಗಮನದಲ್ಲಿಟ್ಟಿರುವಿರಾ? ಅಥವಾ ಬೇರೊಬ್ಬರು ಉಪಯೋಗಿಸುತ್ತಿರುವರೆಂದು ಯಾವುದೋ ಒಂದು ತರಹದ ಸಾಬೂನನ್ನು ಉಪಯೋಗಿಸುತ್ತಿರುವಿರಾ? ಅಥವಾ ಜಾಹಿರಾತುಗಳ ಮನಮೋಹಕರವಾದ ಮಾತುಗಳಿಗೆ ಮರುಳಾಗಿ ಹೋಗಿರುವಿರಾ?

ನಿಮ್ಮ ಚರ್ಮದ ರಕ್ಷಣೆಯು ನೀವು ಉಪಯೋಗಿಸುವ ಸಾಬೂನನ್ನು ಅವಲಂಬಿಸುತ್ತದೆ. ದೇಹಾರೋಗ್ಯವಾದರೋ ಚರ್ಮದ ನೈರ್ಮಲ್ಯವನ್ನವಲಂಬಿಸಿರುತ್ತದೆ. ವ್ಯಾಧಿಗಳನ್ನು ಬಗೆಬಗೆಯ ತೈಲಗಳ ಪೂರಕ ಗುಣಪಡಿಸುವ ಪದ್ಧತಿಯು "ಅಷ್ಟಾಂಗಹೃದಯ" ವೆಂಬ ಪ್ರಾಚೀನ ವೈದ್ಯಗ್ರಂಥದಲ್ಲಿ ತಿಳಿಸಿರುತ್ತದೆ ತೈಲ ಮತ್ತು ಪನ್ನಾರೆ ಸಾಮಾನುಗಳ ಮುಖೇನ ಕ್ರಿಮಿಗಳಕೋಟೆಯನ್ನು ಎದುರಿಸಲಾಗುತ್ತಿತ್ತು.

ಮೈಸೂರು ಗಂಧದ ಸಾಬೂನಿನ ವಿಷಯದಲ್ಲಿ ಮೈಸೂರು ಸರ್ಕಾರವು ಭರವಸೆಯನ್ನು ಕೊಡುತ್ತದೆ. ಇದರ ತಯಾರಿಯಲ್ಲಿ ಉಪಯೋಗಿಸುವ ಪ್ರತಿ ಪದಾರ್ಥವೂ ಜೆನ್ನಾಗಿ ಪರಿಶೋಧಿಸಲ್ಪಡುತ್ತೆ.

ಈ ಕಾರ್ಖಾನೆಯಲ್ಲಿ ತಯಾರಿಸಲ್ಪಡುವ ಪದಾರ್ಥಗಳಲ್ಲಿ ಯಾವ ಬಗೆಯ ಕೆಟ್ಟ ಪದಾರ್ಥವಾಗಲೀ ಹಾನಿಕರವಾದ ಪದಾರ್ಥವಾಗಲೀ ಸೇರಿರುವದಿಲ್ಲವೆಂಬ ಭರವಸೆಯು ಮೈಸೂರು ಸ್ಯಾಂಡಲ್ ಸೋಪಿನ ವಿಷಯದಲ್ಲಿಯೂ ಇರ್ವಯಿಸುತ್ತದೆ.

* ರಾಜಕೀಯ ಪರಿಸ್ಥಿತಿಗಳು *
* ಸಾಮಾಜಿಕ ಸುಧಾರಣೆಗಳು *
* ದೇಶವಿದೇಶ ವರ್ತಮಾನಗಳು *
* ಚಿತ್ರವಿಚಿತ್ರ ವಾರ್ತಾವಳಿಗಳು *

ಇವೆಲ್ಲ ವಿಷಯಗಳ ಕುರಿತು ತಿಳಿಯಬೇಕಾದರೆ, ಇಡೀ ಕರ್ನಾಟಕದ ಹೊರ-ಒಳ ಭಾಗಗಳಲ್ಲಿ ಎಲ್ಲಾ ತರದ ಜನರಿಂದಲೂ ಆದರಿಸಲ್ಪಡುತ್ತಿರುವ

ನವಸಂದೇಶ

ಇದೇ ಚಂದಾದಾರರಾಗಿರಿ.

ಅಂಚೇವೆಚ್ಚ ಸೇರಿ ರೂ. ೩-೮-೦

ಹೆಚ್ಚಿನ ವಿಷಯಗಳಿಗೆ ಮ್ಯಾನೇಜರಿಗೆ ಬರೆಯಿರಿ

ನವಸಂದೇಶ ಕಾರ್ಯಾಲಯ. ಬಳ್ಳಾರಿ

The Satyavadi Limited

(Incorporated in Mysore State)

MYSORE

A few shares of Rs. 5 are available

ಈ ಭರವಸೆಯು ಮೈಸೂರು ಸ್ಯಾಂಡಲ್ ಸೋಪಿಗೆ ಮಾತ್ರವೇ ಅಲ್ಲ. ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆಯಲ್ಲಿ ತಯಾರಾಗುವ ಎಲ್ಲಾ ಒಗೆಯ ಸಾಬೂನುಗಳಿಗೂ ಈ ಭರವಸೆಯು ಅನ್ವಯಿಸುತ್ತದೆ.— ಮೈಸೂರು ಜಾಸ್ಮಿಕ್ ಸೋಪು. ಮೈಸೂರು ಗುಲಾಬ್ ಸೋಪು. ಮೈಸೂರು ಲೆವೆಂಡರ್ ಸೋಪು, ಮೈಸೂರು ಬಾತ್ ಟ್ಯಾಬ್ಲೆಟ್, ಮೈಸೂರು ಪೊಂಗಂ ಬೇವು ಸೋಪು, ಮೈಸೂರು ಟರ್ಕಿಷ್ ಬಾತ್ ಸೋಪು, ಮೈಸೂರು ವಾಷಿಂಗ್ ಸೋಪು, ಮೈಸೂರು ಫೇರಿ ಪ್ಲೇಕ್ಸ್, ಮೈಸೂರು ಕಾರ್ಬಾಲಿಕ್ ಸೋಪು, ಮೈಸೂರು ಲಿಕ್ವಿಡ್ ಸೋಪು. ಟಿಕ್ಟೈಟ್ ಸೋಪು. ಇಂಡೆಕ್ಟಿಸೈಡಲ್ ಸೋಪು ಸಾಫ್ಟ್ ಸೋಪು. ಈ ಎಲ್ಲಾ ಸೋಪುಗಳೂ ಪರಿಶುದ್ಧ ಹಾಗೂ ಶ್ರೇಷ್ಠವಾದುವು.

ಇಷ್ಟು ಮಾತ್ರವೇ ಅಲ್ಲ. ಅಧುನಿಕ ಮಹನೀಯರಿಗೂ ಮಹಿಳೆಯರಿಗೂ ಅನುದಿನವೂ ಅವಶ್ಯಕಗಳಾಗಿರುವ ಈ ಕೆಳಗೆ ವಿವರಿಸಿರುವ ಪದಾರ್ಥಗಳ ವಿಷಯದಲ್ಲಿಯೂ ಮೈಸೂರು ಸರ್ಕಾರವು ಭರವಸೆಯನ್ನು ಕೊಡುತ್ತದೆ.— ಮೈಸೂರು ಸೆರಲೈಟ್ ವ್ಯಾನಿಷಿಂಗ್ ಕ್ರೀಂ ಮೈಸೂರು ಬಿಲಾಸಿನಿ ಬ್ರಿಲಿಯಂಟೈನ್, ಮೈಸೂರು ಫೇರಿ ಪೌಡರ್, ಮೈಸೂರು ಕ್ಯಾಲಿಪೆಡಿಂಗ್ ಸ್ಟಿಕ್, ಮೈಸೂರು ಡೆಂಟಲ್ ಕ್ರೀಂ, ಮೈಸೂರು ಬ್ಲೂ ಡೆಂಟ್, ಮೈಸೂರು ಬೂಟ್ ಪಾಲಿಷ್ (ಬ್ರೌನ್, ಬ್ಲ್ಯಾಕ್, ಡಾರ್ಕ್‌ಟ್ಯಾನ್) ಮೈಸೂರು ಕ್ವಿಕ್ ಫಿಕ್ಸ್, ಐಡೋಕೂರ್.

VAIDYARATNAM

P. S. Varier's

Arya Vaidya Sala
Kottakkal

Branches — Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma Ceylon, Malaya and other colonies alone stands for itsunequalled reliability. All sorts of ayurvedic preparations prepared under scientific methods are always kept here in stock for sale Dhara, Navarakkizhi, Pizhichil and other special treatments of Malabar are conducted under Vaidyaratnam's own supervision. Treatment through correspondance a speciality. Vaidya ratnam vsits his Calicut branch on almost every 1 st and 3 rd Sundays and Palghat Branch on 2 nd and 4th Sundays.

CHYAVANAPRAS

From the time of ancient sages this medicine is reknownedfor its unequalled efficacy in retaining youthfulness. It is so termed because Sage Chyavan was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound Rs 4.

For further particulars and free catologues pleaseapply to—

The Manager, Arya Vaidyasala,
KOTTAKAL (S.Malabar)

ಮುಂದಿನ ವಾರದ ಸತ್ಯವಾದಿ ಪತ್ರಿಕೆಯನ್ನು ಓದಲು ತಪ್ಪಿಸಿರಿ

Edited, Printed & published by M .S. Krishna Rao, at the Satyavadi Press, Chamaraja Agrahar Mysore